ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 156 RNI Number : KNKAN/25/A2770 14-06-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :156 ರಾಯಚೂರು 14-06-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಖಾತೆ ಗೊಂದಲ: ಸಂಪೂರ್ಣ ಜವಾಬ್ದಾರಿ ಇದ್ದರೆ ಉತ್ತಮ ಫಲಿತಾಂಶ ಬರಲಿದೆ

ಬೆಂಗಳೂರು,ಜೂ.13-

ಜವಾಬ್ದಾರಿ ಇದ್ದರೆ ಕೆಲಸ ಮಾಡಲು ಅನುಕೂಲ ಆಗಲಿದೆ. ಸಂಪೂರ್ಣ ಇದ್ದರೆ ಉತ್ತಮ ಫಲಿತಾಂಶ ಬರಲಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬೆಂಗಳೂರು ನಗರಾಭಿವೃದ್ಧಿ ಖಾತೆ ಗೊಂದಲ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಜವಾಬ್ದಾರಿ ಇದ್ದರೆ ಕೆಲಸ ಮಾಡಲು ಅನುಕೂಲ ಆಗಲಿದೆ. ಸಂಪೂರ್ಣ ಇದ್ದರೆ ಉತ್ತಮ ಫಲಿತಾಂಶ ಬರಲಿದೆ. ದೆಹಲಿಯಲ್ಲಿ ಸಿಎಂ ಜೊತೆ ನಾನೂ ಕೆಲವು ಸಭೆ ಅಟೆಂಡ್ ಮಾಡಿದ್ದೆ. ಇಂದು ಜಿಲ್ಲಾಧಿಕಾರಿ, ಎಸ್ಪಿಗಳ ಜೊತೆ ಸಭೆ ನಡೆಸುತ್ತಿದ್ದಾರೆ ಎಂದರು.



ಖಾತೆ ಬಗ್ಗೆ ಅಸಮಾಧಾನ ವಿಚಾರವಾಗಿ ಮಾತನಾಡಿ, ಅಸಮಾಧಾನ ಯಾವುದೂ ಇಲ್ಲ. ಬಹಳ ಕಠಿಣವಾದ ಜವಾಬ್ದಾರಿಯನ್ನು ಸಿಎಂ ಹಾಗೂ ಪಕ್ಷ ವಹಿಸಿದೆ. ಬೆಂಗಳೂರು ಅಭಿವೃದ್ಧಿ ಬಹಳ ಸವಾಲು. ಬಹಳ ಜವಾಬ್ದಾರಿ ಕೂಡ ಇದೆ. ಬೆಂಗಳೂರು ಜನರ ನಿರೀಕ್ಷೆ, ಪಕ್ಷದ ನಿರೀಕ್ಷೆ ಬಹಳಷ್ಟು ಇದೆ. ಇಂತಹ ಸಂಧರ್ಭದಲ್ಲಿ ಜವಾಬ್ದಾರಿ ತೆಗೆದುಕೊಳ್ಳುವಾಗ ಸ್ಪಷ್ಟತೆ ಇರಬೇಕು. ಖಾತೆ ಪಡೆಯುವಾಗ ಅಕೌಂಟಬಲಿಟಿ ಇರಬೇಕು. ಫಲಿತಾಂಶ ರೂಪದಲ್ಲಿ ಇರಬೇಕು. ಜವಾಬ್ದಾರಿ ಜೊತೆಗೆ ಹಂಚಿಕೆ ಬಗ್ಗೆಯೂ ಸ್ಪಷ್ಟವಾಗಿ ಇರಬೇಕು. ನಮ್ಮಿಂದ ನಿರೀಕ್ಷೆ, ಅಕೌಂಟಬಿಲಿಟಿ, ಫಲಿತಾಂಶ ಎಕ್ಸ್ ಪೆಕ್ಟ್ ಮಾಡ್ತಾರೆ. ಇದರ ಬಗ್ಗೆ ಸಿಎಂಗೆ ಮನವರಿಕೆ ಮಾಡಿದ್ದೇನೆ. ಸಿಎಂ ಇತ್ಯರ್ಥ ಮಾಡೋದಾಗಿ ಹೇಳಿದ್ದಾರೆ. ಸಿಎಂ ಸ್ಪಷ್ಟವಾಗಿ ಇನ್ನೆರಡು ದಿನದಲ್ಲಿ ಹೇಳ್ತಾರೆ ಎಂದು ತಿಳಿಸಿದರು.

ಸರಿಪಡಿಸುವವರೆಗೂ ಖಾತೆ ವಹಿಸಿಕೊಳ್ಳಲ್ವಾ ಅನ್ನೋ ಪ್ರಶ್ನೆಗೆ ಸಚಿವ ಕೃಷ್ಣ ಬೈರೇಗೌಡ ಉತ್ತರಿಸದೇ ಹೊರಟರು.

ನಾವೆಲ್ಲ ಸೇವೆ ಮಾಡುವುದಕ್ಕೆ ಬಂದವರು: ವಿಧಾನಸೌಧದಲ್ಲಿ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಖಾತೆ ಹಂಚಿಕೆ ಬಗ್ಗೆ ಕೆಲವರ ಅಸಮಾಧಾನ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಈಗಾಗಲೇ ರಾಮಲಿಂಗಾ ರೆಡ್ಡಿಯವರು ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರಗತಿ ಪರಿಶೀಲನೆ ಮಾಡಿ ಕೆಲಸ ಆರಂಭಿಸಿದ್ದಾರೆ. ಎಲ್ಲಾ ಸಚಿವರು ತಮ್ಮ ಖಾತೆಯ ಜವಾಬ್ದಾರಿಯನ್ನು ಉತ್ತಮವಾಗಿ ಮಾಡ್ತಿದ್ದಾರೆ ಎಂದರು.

ನಿಮಗೆ ಖಾತೆ ಹಂಚಿಕೆ ತೃಪ್ತಿ ಇದೆಯಾ ಎಂಬ ಪ್ರಶ್ನೆಗೆ, ನಾವೆಲ್ಲ ಸೇವೆ ಮಾಡಲು ಬಂದವರು. ಆ ಖಾತೆ, ಈ ಖಾತೆ ಎಂಬ ಪ್ರಶ್ನೆ ಇಲ್ಲ. ದಕ್ಷತೆ, ಪ್ರಾಮಾಣಿಕತೆಯಿಂದ ನಿಭಾಯಿಸಬೇಕೆಂಬ ಬದ್ಧತೆ ಇದೆ. ಅರಣ್ಯ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡಿದ ತೃಪ್ತಿ ಇದೆ. ಈ ಖಾತೆಯನ್ನೂ ಚೆನ್ನಾಗಿ ಮಾಡುತ್ತೇನೆ ಎಂದರು.

ರಾಜ್ಯಕ್ಕೆ ಕೇಂದ್ರ ಸರ್ಕಾರ ಶೇ.30ರಷ್ಟು ಮಾತ್ರ ರಸಗೊಬ್ಬರ ಪೂರೈಕೆ ಮಾಡಿದೆ. ರಾಜ್ಯಗಳಿಗೆ ರಸಗೊಬ್ಬರ ಕೊಡುವ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ಎಷ್ಟು ಅವಶ್ಯಕತೆ ಇದೆಯೋ ಅಷ್ಟು ರಸಗೊಬ್ಬರವನ್ನು ಕೇಂದ್ರ ಸರ್ಕಾರ ಸರಬರಾಜು ಮಾಡಬೇಕು. ಸದ್ಯಕ್ಕೆ ರಸಗೊಬ್ಬರ ಎಷ್ಟಿದೆ ಎಂಬುದರ ಬಗ್ಗೆ ಇವತ್ತು ತಿಳಿಸುತ್ತೇವೆ ಎಂದು ಪ್ರತಿಕ್ರಿಯೆ ನೀಡಿದರು.

ಆತಂಕದಿಂದ ಸಿಎಲ್‌ಪಿ ಸಭೆ ಕರೆಯಲಾಗಿದೆಯಾ ಎಂಬ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಆತಂಕ ಏನಿಲ್ಲ, ಎಸ್‌ಐಆರ್ ಸೇರಿ ಅನೇಕ ಜ್ವಲಂತ ವಿಷಯಗಳಿವೆ. ಇದೆಲ್ಲರ ಬಗ್ಗೆ ಚರ್ಚೆ ಮಾಡಲು, ಸಿಎಲ್‌ಪಿ ಸಭೆ ಕರೆಯಲಾಗಿದೆ ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ದುಂಬಾಲು ಬಿದ್ದ ಸಚಿವಾಕಾಂಕ್ಷಿಗಳು

ಬೆಂಗಳೂರು, ಜೂ. 12-

ಸಚಿವ ಸ್ಥಾನದ ಆಕಾಂಕ್ಷಿಗಳು ಇಂದು ಬೆಂಗಳೂರಿನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ, ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ.

ಹಿರಿಯ ಶಾಸಕ ಆರ್.ವಿ.ದೇಶಪಾಂಡೆ, ಹಂಪನಗೌಡ ಬಾದರ್ಲಿ, ಮಾಜಿ ಸಚಿವ ಮಾಂಕಾಳ ವೈದ್ಯ ಸೇರಿದಂತೆ ಹಲವಾರು ಮಂದಿ ಖರ್ಗೆ ಅವರನ್ನು ಭೇಟಿ ಮಾಡಿದ್ದಾರೆ.

ಇಂದು ಖರ್ಗೆ ಅವರು ಬೆಂಗಳೂರಿಗೆ ಆಗಮಿಸಿದರು. ರಾಜ್ಯಸಭೆಯ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಅವರು, ಚುನಾವಣಾಧಿಕಾರಿಯಿಂದ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ. ಇಂದು ಖರ್ಗೆ ಅವರನ್ನು ಭೇಟಿ ಮಾಡಿದ ಬಹಳಷ್ಟು ಶಾಸಕರು ಸಂಪುಟದಲ್ಲಿ ಅವಕಾಶ ಕಲ್ಪಿಸಿಕೊಡುವಂತೆ ಒತ್ತಡ ಹಾಕಿದ್ದಾರೆ.

ಆರ್.ವಿ.ದೇಶಪಾಂಡೆ ತಾವು ಅತ್ಯಂತ ಹಿರಿಯ ಶಾಸಕರಾಗಿದ್ದು, ಬಹುತೇಕ ಇದು ನನ್ನ ಕೊನೆಯ ಚುನಾವಣೆ. ಹಲವಾರು ಬಾರಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಕಳೆದ ಮೂರು ವರ್ಷಗಳಿಂದ ತಮುನ್ನು ಹೊರಗಿಡಲಾಗಿದೆ. ಸಂಪುಟದಲ್ಲಿ ಬ್ರಾಹಣ ಸಮುದಾಯಕ್ಕೆ ಪ್ರಾತಿನಿಧ್ಯ ಸಿಕ್ಕಿಲ್ಲ. ಹೀಗಾಗಿ ತಮಗೆ ಅವಕಾಶ ಕೊಡಿಸುವಂತೆ ಖರ್ಗೆ ಅವರಲ್ಲಿ ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಮಾಂಕಾಳ ವೈದ್ಯ ಅವರು ಉತ್ತರ ಕರ್ನಾಟಕ ಭಾಗಕ್ಕೆ ಪ್ರಾತಿನಿಧ್ಯ ಸಿಕ್ಕಿಲ್ಲ, ಮೇಲಾಗಿ ತಾವು ಸಚಿವನಾಗಿ ಉತ್ತಮ ಕೆಲಸ ಮಾಡಿದ್ದೇನೆ. ಡಿ.ಕೆ.ಶಿವಕುಮಾರ್ ಅವರ ಸಂಪುಟದಲ್ಲೂ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ.

ಸಿಂಧನೂರು ಕ್ಷೇತ್ರದ ಶಾಸಕ ಹಂಪನಗೌಡ ಬಾದರ್ಲಿ ಖರ್ಗೆ ಅವರ ಭೇಟಿಯ ವೇಳೆ ತಮಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಪಕ್ಷದ ನಿಷ್ಠಾವಂತನಾಗಿ ಕೆಲಸ ಮಾಡಿದ್ದೇನೆ. ಸಂಪುಟದಲ್ಲಿ ಅವಕಾಶ ಮಾಡಿಕೊಡಿ ಎಂದು ಒತ್ತಾಯಿಸಿರುವುದಾಗಿ ತಿಳಿದು ಬಂದಿದೆ. ಈ ಮೊದಲು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಬಹುತೇಕರು ಸಚಿವ ಸ್ಥಾನ ಹಾಗೂ ಯಾವುದೇ ಅವಕಾಶಗಳಿಗಾದರೂ ಸಿದ್ದರಾಮ ಯ್ಯ ಅವರ ಮನೆಗೆ ಭೇಟಿ ನೀಡುತ್ತಿದ್ದ ರೂಢಿ ಸಂಪ್ರ ದಾಯವಿತ್ತು. ಸಿದ್ದರಾಮಯ್ಯ ಅಧಿಕಾರದಿಂದ ಕೆಳಗಿಳಿದ ಬಳಿಕ ಶಾಸಕರ ಹಾಜರಾತಿ ಕಡಿಮೆಯಾಗಿದೆ. ಡಿ.ಕೆ.ಶಿ ಅವರ ಭೇಟಿ ಸುಲಭಸಾಧ್ಯವಿಲ್ಲ ಎಂಬ ಪರಿಸ್ಥಿತಿಯಿದ್ದು, ಎಲ್ಲರೂ ಮಲ್ಲಿಕಾರ್ಜುನ ಖರ್ಗೆ ಅವರ ಬೆನ್ನು ಹತ್ತಲಾರಂಭಿಸಿದ್ದಾರೆ.

ಮೆಟ್ರಿಕ್ ಪೂರ್ವ ವಸತಿ ನಿಲಯ ಉಳಿಸಲು ಎಐಡಿಎಸ್‌ಒ ಪ್ರತಿಭಟನೆ

ರಾಯಚೂರು,ಜೂ.13-

ಹಿಂದುಳಿದ ವರ್ಗಗಳ ಕಲ್ಯಾಣ (ಬಿಸಿಎಂ) ಇಲಾಖೆಯ ಅಧೀನದ 'ಲ್ಲಿರು ವ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಯಥಾಸ್ಥಿತಿಯಲ್ಲಿ ಮುಂದುವರಿಸುವಂತೆ ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐ ಡಿಎಸ್‌ಒ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.



ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿ ಮುಖಂಡರು ಹಾಗೂ ಸಂಘಟನೆಯ ಪದಾಧಿಕಾರಿಗಳು, ಜಿಲ್ಲೆಯ ಅರಬ್ ಮೊಹಲ್ಲಾ, ಆಶಾಪುರ ರಸ್ತೆ, ಕವಿತಾಳ, ನೀಲಗಲ್, ಮಟ್ಟೂರು ಹಾಗೂ ಸಂತೆಕಲ್ಲೂರು ಸೇರಿದಂತೆ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಉನ್ನತೀಕರಿಸುವ ಹಾಗೂ ಕೆಲವು ನಿಲಯಗಳನ್ನು ಸ್ಥಗಿತಗೊಳಿಸುವ ಕ್ರಮವನ್ನು ಖಂಡಿಸಿದರು.

ಗ್ರಾಮೀಣ ಪ್ರದೇಶಗಳ ಬಡ ರೈತರು, ಕೂಲಿ ಕಾರ್ಮಿಕರು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಈ ವಸತಿ ನಿಲಯಗಳು ಶಿಕ್ಷಣ ಮುಂದುವರಿಸಲು ಪ್ರಮುಖ ಆಧಾರವಾಗಿವೆ. ಉನ್ನತೀಕರಣದ ಹೆಸರಿನಲ್ಲಿ ಮೆಟ್ರಿಕ್ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಡಿಮೆಯಾಗುತ್ತಿದ್ದು, ಶಿಕ್ಷಣದಿಂದ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗುವ ಭೀತಿ ಇದೆ ಎಂದು ಪ್ರತಿಭಟನಾಕಾರರು ತಿಳಿಸಿದರು. ''ಶಿಕ್ಷಣವು ವ್ಯಾಪಾರವಲ್ಲ, ಅದು ಪ್ರತಿಯೊಬ್ಬ

4 ನೇ ಪುಟಕ್ಕೆ...

ರಾಜ್ಯಮಟ್ಟದಲ್ಲಿ ಲಾರಿ ಮಾಲೀಕರ ಸಮಾವೇಶ ಇಂದು

ಫಿಟ್‌ನೆಸ್ ಶುಲ್ಕ ಕಡಿತ ಟೋಲ್ ವಿನಾಯಿತಿ ಸೇರಿ ಹಲವು ಬೇಡಿಕೆಗಳ ಮಂಡನೆ

ರಾಯಚೂರು,ಜೂ.13-

ರಾಜ್ಯದ ಲಾರಿ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್ ವತಿಯಿಂದ 35ನೇ ವಾರ್ಷಿಕ ಸರ್ವ ಸದಸ್ಯರ ರಾಜ್ಯಮಟ್ಟದ ಸಭೆ ಜೂನ್ 14ರಂದು ನಗರದ ಗ್ರೀನ್ ಪ್ಯಾಲೇಸ್ ಫಂಕ್ಷನ್ ಹಾಲ್‌ನಲ್ಲಿ ನಡೆಯಲಿದೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಸಿ. ನವೀನ್ ರೆಡ್ಡಿ, ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 1,000ರಿಂದ 1,200 ಲಾರಿ ಮಾಲೀಕರು ಹಾಗೂ ಪದಾಧಿಕಾರಿಗಳು



ಸಭೆಯಲ್ಲಿ ಭಾಗವಹಿಸಲಿದ್ದು, ಸರಕು ಸಾಗಾಣಿಕೆ ಕ್ಷೇತ್ರದ ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಾಗುವುದು ಎಂದರು.

20 ವರ್ಷಕ್ಕಿಂತ ಹಳೆಯ ವಾಹನಗಳ ಫಿಟ್‌ನೆಸ್ ಶುಲ್ಕವನ್ನು ₹1,200ರಿಂದ ₹30 ಸಾವಿರಕ್ಕೆ ಹೆಚ್ಚಿಸಿರುವುದನ್ನು ಹಿಂಪಡೆಯಬೇಕು, ಡೀಸೆಲ್ ಮೇಲಿನ ತೆರಿಗೆ ಕಡಿತಗೊಳಿಸಬೇಕು ಹಾಗೂ ಸರಕು ವಾಹನಗಳಿಗೆ ಟೋಲ್ ಶುಲ್ಕದಿಂದ ವಿನಾಯಿತಿ ನೀಡಬೇಕು ಎಂಬ ಬೇಡಿಕೆಗಳನ್ನು ಸಭೆಯಲ್ಲಿ ಮುಂದಿರಿಸಲಾಗುವುದು ಎಂದು ತಿಳಿಸಿದರು.

ಇದರ ಜೊತೆಗೆ ಹೆದ್ದಾರಿಗಳಲ್ಲಿ ಚಾಲಕರಿಗೆ ವಿಶ್ರಾಂತಿ ನಿಲ್ದಾಣಗಳ ನಿರ್ಮಾಣ, ಸಾರಿಗೆ ಇಲಾಖೆಯ ಚೆಕ್‌ಪೋಸ್ಟ್ ತೆರವು, ವಿಎಲ್‌ಟಿಡಿ ಜಿಪಿಎಸ್ ಸಾಧನಗಳ ಅತಿಯಾದ ಶುಲ್ಕ ವಸೂಲಿಗೆ ಕಡಿವಾಣ ಸೇರಿದಂತೆ ಹಲವು ವಿಷಯಗಳು ಚರ್ಚೆಗೆ ಬರಲಿವೆ ಎಂದರು.

ಇಂಧನ ಹಾಗೂ ನಿರ್ವಹಣಾ

4 ನೇ ಪುಟಕ್ಕೆ...

ಅಂತರರಾಷ್ಟ್ರಿಯ ಯೋಗ ದಿನಾಚರಣೆ ಪೂರ್ವಭಾವಿ ಸಭೆ

ಯೋಗ ದಿನಾಚರಣೆಗೆ ಅಗತ್ಯ ಸಿದ್ಧತೆ ಕೈಗೊಳಿ: ಸಹಾಯಕ ಆಯುಕ್ತ ಡಾ.ಹಂಪಣ್ಣ



ರಾಯಚೂರು ಜೂ.13

ನಗರದ ಜಿಲ್ಲಾ ಜಿಲ್ಲಾ ಕ್ರೀಡಾಂಗಣದಲ್ಲಿ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಜೂನ್ 21 ರಂದು ಬೆಳಿಗ್ಗೆ 6.45ಗಂಟೆಗೆ 12ನೇ ಅಂತರರಾಷ್ಟ್ರಿಯ ಯೋಗ ದಿನಾಚರಣೆಯನ್ನು ಆಯೋಜಿಸಲಾಗುವುದು. ಸಾವಿರಾರು ಯೋಗಾಪಟುಗಳು ಭಾಗವಹಿಸುವರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಸಲಾಗುವುದು. ಇದಕ್ಕೆ ಬೇಕಾದ ಸಿದ್ದತೆಯನ್ನು ಸಂಬಧಿಸಿದ ಇಲಾಖೆಯ ಅಧಿಕಾರಿಗಳು ಕೈಗೊಳ್ಳಬೇಕೆಂದು ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್ ಅವರು ಸೂಚಿಸಿದರು.

ಜೂನ್ 12ರ ಶುಕ್ರವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಂತರಾಷ್ಟ್ರಿಯ ಯೋಗ ದಿನಾಚರಣೆ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯೋಗವನ್ನು ಕೇವಲ ಒಂದೇ ದಿನಕ್ಕೆ ಸೀಮಿತಗೊಳಿಸದೇ ಪ್ರತಿದಿನ ಯೋಗಾಸನಗಳನ್ನು ಮಾಡುವ ಮೂಲಕ ಉತ್ತಮ ಆರೋಗ್ಯವನ್ನು

4 ನೇ ಪುಟಕ್ಕೆ...

ಸ್ಲಂ ಜನರಿಗೆ ಕಾಂಗ್ರೆಸ್ ಸರ್ಕಾರ ನೀಡಿದ ಭರವಸೆಗಳನ್ನು ಸಿ.ಎಂ. ಡಿ.ಕೆ. ಶಿವಕುಮಾರ್ ಈಡೇರಿಸಬೇಕು-ಎ. ನರಸಿಂಹಮೂರ್ತಿ

ರಾಯಚೂರು ,ಜೂ.13-

2023 ರಲ್ಲಿ ಈಗಾಗಲೇ ಕಾಂಗ್ರೆಸ್ ಸರ್ಕಾರ ಸ್ಲಂ ಜನರಿಗೆ ತಮ್ಮ ಸರ್ವಜನಾಂಗದ ಶಾಂತಿಯ ತೋಟದ ಪ್ರಣಾಳಿಕೆಯಲ್ಲಿ ನೀಡಿರುವ 10 ಭರವಸೆಗಳಲ್ಲಿ ಈಗಿನ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಈಡೇರಿಸಬೇಕು. ಇದಕ್ಕಾಗಿ ಜೂನೆ-20 ರಂದು ಗದಗನಲ್ಲಿ ಸ್ಲಂ ಜನಾಂದೋಲನ-ಕರ್ನಾಟಕ ರಾಜ್ಯ ಪ್ರತಿನಿಧಿಗಳ ಸಮಾವೇಶ ಸಲದಲಿ ಓಲೈಸಲಾಗುವುದೆಂದು ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಂಚಾಲಕರಾದ ಎ.ನರಸಿಂಹಮೂರ್ತಿ ಒತ್ತಾಯಿಸಿದರು.

ಇಂದು ನಗರದ ಕನ್ನಡ ಭವನದಲ್ಲಿ ರಾಯಚೂರು ಸ್ಲಂ



ನಿವಾಸಿಗಳ ಕ್ರಿಯಾವೇದಿಕೆಗೆ ಮುಂದಿನ 3 ವರ್ಷಗಳ ಅವಧಿಗೆ ಪದಾಧಿಕಾರಿಗಳ ಆಯ್ಕೆ ಮತ್ತು ಪದಗ್ರಹಣದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಸ್ಲಂ ಜನರಿಗೆ ಕಾಂಗ್ರೆಸ್ ಸರ್ಕಾರದ ಮೇಲೆ ಇದ್ದ ನಿರೀಕ್ಷೆಗಳು ಹುಸಿಯಾಗಿವೆ. ಕಳೆದ 3 ವರ್ಷಗಳಲ್ಲಿ ಶ್ರೀ ಸಿದ್ದರಾಮಯ್ಯ ನೇತೃತ್ವಲ್ಲಿ ನಡೆದ ಸರ್ಕಾರ ಸ್ಲಂ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವ ಪ್ರಮಾಣಿಕ ಪರಯತ್ನ ಮಾಡಿಲ್ಲ. ಇದರಿಂದ ಇಲಾಖೆಯಲ್ಲಿ ದಕ್ಷ ಸಚಿವರನ್ನು ಮತ್ತು ಅಧ್ಯಕ್ಷರನ್ನು ನೇಮಿಸದೇ ಶ್ರೀ ಜಮೀರ್ ಅಹ್ಮದ್ ಎಂಬ ಉಡಾಳನಿಗೆ ನೀಡಿದಲ್ಲಿ ಸ್ಲಂ ನಿವಾಸಿಗಳಿಗೆ ನೀಡಿದ ದ್ರೋಹ ಇಂದು ಸಿದ್ದು ಮತ್ತು ಡಿ.ಕೆ.ಶಿ. ಎಂಬ ಎರಡು ಅಧಿಕಾರಿಗಳ ಕೇಂದ್ರದ ಸುರಕ್ಷತೆಯಲ್ಲಿ ನಮಗೆ ನೀಡಿದ ಭರವಸೆಗಳು ಸಾಮಾನ್ಯವಾಗಿವೆ. ಬಡಜನರ ಕಲ್ಯಾಣ ಕಾರ್ಯಕ್ರಮಗಳು ಮತು ಜನಪರ ಅಭಿವೃದ್ಧಿಗಳು ನೆನೆಗುದಿಗೆ ಬಿದ್ದಿವೆ. ಸ್ಲಂ ಜನರಿಗೆ ನೀಡಿದ ಹಕಕುಪತ್ರಗಳು, ಪ್ರಧಾನಮಂತ್ರಿ ವಸತಿ ಯೋಜನೆ, ಮೂಲಬೂತ ಸೌಕರ್ಯಗಳು ಹಳ್ಳ ಹಿಡಿದಿವೆ. ಆನವರಿ-24 ರಂದು ಹುಬ್ಬಳ್ಳಿಯಲ್ಲಿ ನಡೆದ ಸಮಾವೇಶ ಬರೀ ಪ್ರಚಾರವೇ ಹೊರತು ಸಾಧನೆಯಲ್ಲಿ ಸ್ಲಂ ಜನರಿಗೆ ನಗರ ಉದ್ಯೋಗ ಖಾತ್ರಿ, ಪ್ರತ್ಯೇಕ ಸಚಿವಾಲಯ ವಸತಿ ಹಕ್ಕು ನಗರ ಲ್ಯಾಂಡ್ ಬ್ಯಾಂಕ್, ಉಚಿತ ಮನೆ, ಬಡಜನರ ಕಡಿಮೆ ಮಾಡುವ ಘೋಷಣೆಗಳನ್ನು ಕಾಂಗ್ರೆಸ್ ಸರ್ಕಾರ ಮರೆತಿದೆ. ಇದನ್ನು ನೆರವೇರಿಸಲು ಎಂದರು.

20 ಸ್ಲಂಗಳ ಘೋಷಣೆ ಜವಾಬ್ದಾರಿ ನಮ್ಮ ಮೇಲಿದೆ : ಜನಾರ್ಧನ್ ಹಳ್ಳಿಬೆಂಚಿ: ನೂತನವಾಗಿ

4 ನೇ ಪುಟಕ್ಕೆ...



ಕರ್ನಾಟಕ ಸರ್ಕಾರದ ಸಂಪುಟ ದರ್ಜೆಯ ನಗರಾಭಿವೃದ್ಧಿ ಸಚಿವರಾದ ಯತೆಂದ್ರ ಸಿದ್ದರಾಮಯ್ಯ ಅವರಿಗೆ ಇಂದು ಕೆಪಿಸಿಸಿ ಹಿಂದುಳಿದ ವರ್ಗದ ಉಪಾಧ್ಯಕ್ಷರಾದ ಭೇಟಿ ಮಾಡಿ ಶುಭಾಶಯ ಕೋರಿದರು. ಅವರಿ ಸಂದರ್ಭದಲ್ಲಿ ಯುವಕರಾದ ನಿಮಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಂಪುಟದಲ್ಲಿ ಪ್ರಭಲ ಖಾತೆ ಸಿಕ್ಕಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ರಾಜ್ಯದ ಜನ ನಿಮ್ಮಂಥ ಚಾಣಕ್ಯ ಮತ್ತು ಉನ್ನತ ಶಿಕ್ಷಣ ಪಡೆದವರಿಂದ ಬಹಳಷ್ಟು ಅಭಿವೃದ್ಧಿಯ ನಿರೀಕ್ಷೆ ಮಾಡುತ್ತಿದೆ ಎಂದರು. ಕಲ್ಯಾಣ ಕರ್ನಾಟಕ ಭಾಗವು ಎಲ್ಲಾ ರಂಗದಲ್ಲಿಯೂ ಹಿಂದುಳಿದಿದ್ದು ಈ ಭಾಗದ ಅಭಿವೃದ್ಧಿಗೂ ತಾವು ಒತ್ತುಕೊಡಬೇಕು ವಿವಿಧ ಹೊಸ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸಮಾಜದ ಮುಖ್ಯವಾಗಿ ಮತ್ತು ಪ್ರಾದೇಶಿಕ ಸಮತೋಲನ ನಿವಾರಣೆಗೆ ಕೊಡುಗೆ ಕೊಡಬೇಕೆಂದು ಕೋರಿದರು.

ಕರ್ನಾಟಕಪ್ರವಾಸ; ಉಡುಪಿ ಶ್ರೀಕೃಷ್ಣ ಮಠಕ್ಕೆಕೇಂದ್ರ ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ

ಉಡುಪಿ,ಜೂ.13-

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಉಡುಪಿಯ ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದ್ದಾರೆ. ಕರ್ನಾಟಕ ಪ್ರವಾಸದ ಭಾಗವಾಗಿ ಸೀತಾರಾಮನ್ ಅವರು ಉಡುಪಿಗೆ ಆಗಮಿಸಿ ಶ್ರೀಕೃಷ್ಣನ ದರ್ಶನ ಪಡೆದಿದ್ದಾರೆ.

ಸದ್ಯ ಕೃಷ್ಣ ಮಠದ ಪರ್ಯಾಯ ಪೀಠವನ್ನು ಅಲಂಕರಿಸಿರುವ ಶಿರೂರು ಮಠದ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿಯನ್ನು ಭೇಟಿಯಾದರು ಮತ್ತು ಭೇಟಿಯ ಸಮಯದಲ್ಲಿ ಅವರ ಆಶೀರ್ವಾದವನ್ನು ಪಡೆದರು. ಇಬ್ಬರೂ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು.



ನೀರಾವರಿ ಇಲಾಖೆಯಲ್ಲಿ ಅವ್ಯವಾರ, ಭ್ರಷ್ಟಾಚಾರ ಕ್ರಮಕ್ಕೆ ಒತ್ತಾಯ

ರಾಯಚೂರು ,ಜೂ.13-

ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಅವಿರೋಧವಾಗಿ ಆಯ್ಕೆಯಾಗಿರುವ ನಮ್ಮ ನೆಚ್ಚಿನ ರಾಷ್ಟ್ರೀಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ಕಂಚು ಮಾರೆಮ್ಮ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಕ್ರಿಕೆಟ್ ಪಂದ್ಯಾ



ರಾಯಚೂರು ,ಜೂ.13-

ಪೌರಾಣಿಕ ಮತ್ತು ಐತಿಹಾಸಿಕ ಪ್ರಸಿದ್ಧವಾದ ರಾಯಚೂರು ನಗರದ ಹರಿಜನವಾಡದಲ್ಲಿ ಕಂಚು ಮಾರೆಮ್ಮ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಕ್ರಿಕೆಟ್ ಪಂದ್ಯಾವಳಿಗಳು ಆರಂಭಗೊಂಡವು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಅಧ್ಯಕ್ಷರಾದ ಎ. ಉರುಕುಂದಪ್ಪ ಆಗಮಿಸಿದ್ದರು.

ಅವರು ಈ ಸಂದರ್ಭದಲ್ಲಿ ಮಾತನಾಡಿ ಪ್ರತಿಯೊಬ್ಬರು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ದೇಹ ಚಟುವಟಿಕೆಯಿಂದ ಇರಬೇಕೆಂದರೆ ವ್ಯಾಯಾಮ, ಯೋಗ, ಧ್ಯಾನದಲ್ಲಿ ತೊಡಗಿಸಿಕೊಳ್ಳಬೇಕು ಎಂದರು .

ಕ್ರೀಡೆಗಳು ಉತ್ತಮ ಆರೋಗ್ಯಕ್ಕೆ ಸಹಕಾರಿ. ವೇದ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ರಕ್ತದ ಒತ್ತಡ ಮಧುಮೆಯ ಹೃದಯ ರೋಗ ಕಾಯಿಲೆಗಳು ಬರುವುದಿಲ್ಲವೆಂದು

4 ನೇ ಪುಟಕ್ಕೆ...

ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಆನ್‌ಲೈನ್ ಕಲಿಕೆ ಅಗತ್ಯ-ಪ್ರೊ.ನಾಗೇಶ್ವರ ರಾವ್



ಬಳ್ಳಾರಿ,ಜೂ.13-

ಉನ್ನತ ಶಿಕ್ಷಣದ ಆಶಯಗಳನ್ನು ಸಾಕಾರಗೊಳಿಸಲು ಭಾರತ ಸರ್ಕಾರವು ಸ್ವಯಂ, ಮೂಕ್ಸ್ ಮಾದರಿಯ ಆನ್‌ಲೈನ್ ಕಲಿಕಾ ಕೋರ್ಸ್‌ಗಳನ್ನು ಪರಿಚಯಿಸಿದ್ದು, ವಿದ್ಯಾರ್ಥಿಗಳು ತಮ್ಮ ಜ್ಞಾನಾಭಿವೃದ್ಧಿಗೆ ಆನ್‌ಲೈನ್ ಕಲಿಕಾ ಪ್ರಕ್ರಿಯೆಗೆ ಹೊಂದಿಕೊಳ್ಳಬೇಕು ಎಂದು ನವದೆಹಲಿಯ ನ್ಯಾಕ್ ಸಮಿತಿಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷ ಪ್ರೊ.ನಾಗೇಶ್ವರ ರಾವ್ ಅವರು ಹೇಳಿದರು.

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಬಯಲು ಸಭಾಂಗಣದಲ್ಲಿ ಶುಕ್ರವಾರದಿಂದ ಆರಂಭವಾಗಿರುವ ವಾಣಿಜ್ಯ ಹಾಗೂ ನಿರ್ವಹಣಾಶಾಸ್ತ್ರ ಅಧ್ಯಾಪಕರ ರಾಜ್ಯ ಸಂಘ ಹಾಗೂ ವಿಶ್ರೀಕೃವಿವಿ ಸಹಭಾಗಿತ್ವದಲ್ಲಿ ಆಯೋಜಿಸಿರುವ ಎರಡು ದಿನಗಳ ತಂತ್ರಜ್ಞಾನ ಆಧಾರಿತ ವ್ಯವಹಾರ ಪದ್ಧತಿಗಳು ಮತ್ತು ಕಾರ್ಯತಂತ್ರದ ಜಾಗತಿಕ ಸಮಾಗಮ ಎಂಬ ವಿಚಾರ ಸಂಕಿರಣ ಗಣ್ಯರೊಂದಿಗೆ ಉದ್ಘಾಟಿಸಿ ಅವರು ಮಾತನಾಡಿದರು.

ನ್ಯಾಕ್ ಸಮಿತಿಯು ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಪ್ರಗತಿಗೆ ಆದ್ಯತೆ ನೀಡುತ್ತದೆ. ಗುಣಮಟ್ಟದ ಶಿಕ್ಷಣ ಒದಗಿಸುವ ಸಂಸ್ಥೆಗಳಿಗೆ ಅರ್ಹತೆಗೆ ಅನುಗುಣವಾಗಿ ಗ್ರೇಡ್‌ಗಳನ್ನು ನೀಡುತ್ತದೆ. ನ್ಯಾಕ್ ಮಾನ್ಯತೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಮೌಲ್ಯಮಾಪನ ವ್ಯವಸ್ಥೆಗಳಿದ್ದು, ಆಯಾ ಮಾನದಂಡಗಳಿಗೆ ಅನುಸಾರವಾಗಿ ಗ್ರೇಡಿಂಗ್‌ಗಳನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಕಾಲೇಜು ಶಿಕ್ಷಣ ಮತ್ತು ಉನ್ನತ ಶಿಕ್ಷಣವು ಸದೃಢವಾಗಿದೆ. ವಿದ್ಯಾರ್ಥಿಗಳು ಆನ್‌ಲೈನ್ ಕೋರ್ಸ್‌ಗಳಿಗೆ ನೋಂದಣಿ ಮಾಡಿಕೊಂಡು ವರ್ಷಕ್ಕೆ ಒಂದಾದರೂ ಕೋರ್ಸ್ ಪೂರ್ಣಗೊಳಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಬೆಂಗಳೂರಿನ ಥಾಮ್ಸನ್ ರಾಯ್ಟ್ಸ್ ಎಐ ಕೇಂದ್ರದ ಹಿರಿಯ ನಿರ್ದೇಶಕ ಡಾ.ರಮೇಶ್ ಬಾಬು ಚಲ್ಲಪ್ಪನ್ ಅವರು ಮಾತನಾಡಿ, ಎಐ ಎಂದಿಗೂ ಮಾನವನ ಕೆಲಸ ಕಸಿಯಲು ಸಾಧ್ಯವಿಲ್ಲ. ವರ್ತಮಾನಕ್ಕೆ ತಕ್ಕಂತೆ ತಂತ್ರಜ್ಞಾನಗಳ ಜ್ಞಾನ ಪಡೆದುಕೊಂಡು ಸಾಗಿದರೆ ಯಾವ ಕೆಲಸವೂ ಕಷ್ಟವಲ್ಲ ಎಂದರು.

ಕಾರ್ಯಕ್ರಮದ ದಿಕ್ಸೂಚಿ ಭಾಷಣಕಾರರಾರು ಮೂಲತಃ ಬಳ್ಳಾರಿಯವರಾದ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಖ್ಯಾತ ಲೆಕ್ಕ ಪರಿಶೋಧಕ ಸಿ ಎ ಕೆ ಗುರುರಾಜ್ ಅವರು ಮಾತನಾಡಿ, 20 ವರ್ಷಗಳ ಹಿಂದಿನ ಶಿಕ್ಷಣ ಪದ್ದತಿಗೂ ಹಾಗೂ ಇಂದಿನ ಡಿಜಿಟಲ್ ವಿದ್ಯಮಾನಗಳಿಗೂ ಸಾಕಷ್ಟು ಬದಲಾವಣೆಗಳಾಗಿವೆ. ಎಲ್ಲ ಕ್ಷೇತ್ರಗಳಲ್ಲಿಯೂ ಡಿಜಿಟಲ್ ಪದ್ಧತಿ ಅಳವಡಿಕೆಗೊಂಡಿದೆ. ಶಿಕ್ಷಣ ಕ್ಷೇತ್ರವೂ ಇದಕ್ಕೆ ಹೊರತಾಗಿಲ್ಲ. ಸಾಂಪ್ರದಾಯಿಕ ಅಕೌಂಟಿಗ್ ಮತ್ತು ಆದಾಯ ತೆರಿಗೆ ಪದ್ಧತಿಯೂ ರೂಪಾಂತರಗೊಡಿವೆ ಎಂದರು.

ಸ್ವಯ ಅಧ್ಯಯನ, ವಿದ್ಯಾರ್ಥಿಗಳಲ್ಲಿ ವಿಶ್ವಾಸಾರ್ಹತೆ ಹೆಚ್ಚಿಸುವುದು, ಆಲೋಚನಾ ಶಕ್ತಿ, ತಾಂತ್ರಿಕ ಕಲಿಕೆಗೆ ಉತ್ತೇಜನ, ನೈತಿಕ ಜವಾಬ್ದಾರಿಗಳನ್ನು ತಿಳಿಸಿಕೊಡುವುದರಿಂದ ಒಬ್ಬ ಉತ್ತಮ ಪ್ರಜೆಯನ್ನು ರೂಪಿಸಬಹುದು ಎಂದು ಹೇಳಿದರು.

ವಿವಿಯ ಕುಲಪತಿ ಪ್ರೊ.ಎಂ.ಮುನಿರಾಜು ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಗಾಗಿ ವಿವಿಧ ಹೊಸ ಕೋರ್ಸ್‌ಗಳನ್ನು ಸ್ಥಾಪಿಸುವುದು. ಕ್ಯಾಂಪಸ್‌ನಲ್ಲಿ ಐಟಿ ಮತ್ತು ಬಯೋ ಇನ್ನೋವೇಷನ್ ಸೆಂಟರ್, ಸ್ಪೋರ್ಟ್ಸ್ ಅಕ್ಯಾಡೆಮಿ ತೆರೆಯಲಾಗುವುದು ಮತ್ತು ಮುಂದಿನ ಘಟಿಕೋತ್ಸವಕ್ಕೆ ದೇಶದ ರಾಷ್ಟಪತಿಗಳನ್ನು ಆಹ್ವಾನಿಸಿ ಈ ಭಾಗಕ್ಕೆ ಬಲ ತುಂಬಲು ಪ್ರಯತ್ನಿಸುವುದಾಗಿ ತಿಳಿಸಿದರು.

ರಾಣಿ ಚನ್ನಮ್ಮ ವಿವಿಯ ನಿವೃತ್ತ ಕುಲಪತಿ ಪ್ರೊ.ಎಂ ರಾಮಚಂದ್ರರಾವ್ ಅವರು ಮಾತನಾಡಿ, ತಾಂತ್ರಿಕ ಆಧಾರಿತ ಹಾಗೂ ಔದ್ಯೋಗಿಕ ಆಧಾರಿತ ಶಿಕ್ಷಣವನ್ನು ಪಠ್ಯದಲ್ಲಿ ಅಳವಡಿಸಿದಲ್ಲಿ ವಿದ್ಯಾರ್ಥಿಗಳು ಕೆಲಸ ಪಡೆಯಬಹುದು. ನ್ಯಾಕ್ ಮಾನ್ಯತೆಯಿಂದ ಅನುದಾನಗಳು ಸಿಗುವಂತಾದರೆ ಎಲ್ಲ ಕಾಲೇಜುಗಳು ನ್ಯಾಕ್ ಮಾನ್ಯತೆಗೆ ಮುಂದಾಗುತ್ತಾರೆ. ಮುಂದಿನ 10 ವರ್ಷಗಳ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ವಿವಿಗಳು ಪಠ್ಯಕ್ರಮ ರಚಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ವಾಣಿಜ್ಯ ಹಾಗೂ ನಿರ್ವಹಣಾಶಾಸ್ತ್ರ ಅಧ್ಯಾಪಕರ ರಾಜ್ಯ ಸಂಘದ ಅಧ್ಯಕ್ಷ ಪ್ರೊ.ಬಾಲಕೃಷ್ಣ ಪೈ ಅವರು ಮಾತನಾಡಿ, ಬದಲಾವಣೆ ಜಗತ್ತಿನ ನಿರಂತರ ನಿಯಮವಾಗಿದೆ. ಅವುಗಳಿಗೆ ತಕ್ಕಂತೆ ಸಾಗುವುದು ನಮ್ಮೆಲ್ಲರ ಕರ್ತವ್ಯ. ಕಲ್ಯಾಣ ಕರ್ನಾಟಕ ಭಾಗದ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಪ್ರಾಧ್ಯಾಪಕರು ಹಾಗೂ ಪರಿಣಿತರನ್ನು ವಿಶ್ವವಿದ್ಯಾಲಯಗಳಿಗೆ ಆಹ್ವಾನಿಸಿ ಅವರ ಪ್ರಗತಿಪರ ಚಿಂತನೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಕೆಲಸ ಆಗಲಿ ಎಂದು ಆಶಿಸಿದರು.

ಕಾರ್ಯಕ್ರಮದ ಭಾಗವಾಗಿದ್ದ ವಾಣಿಜ್ಯ ಹಾಗೂ ನಿರ್ವಹಣಾಶಾಸ್ತ್ರ ವಿಷಯಗಳ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ನಿವೃತ್ತ ಹಿರಿಯ ಪ್ರಾಧ್ಯಾಪಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಎರಡು ದಿನಗಳ ವಿಚಾರ ಸಂಕಿರಣದಲ್ಲಿ ರಾಜ್ಯದ ವಿವಿಧ ಭಾಗಗಳಿಂದ 500ಕ್ಕೂ ಹೆಚ್ಚು ಪ್ರಾಧ್ಯಾಪಕ ವರ್ಗ, ಸಂಶೋಧಕ ವರ್ಗ ಆಗಮಿಸಿದೆ.

ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ವಿ ಲೋಕೇಶ್, ವಿತ್ತಾಧಿಕಾರಿ ಸ್ಫೂರ್ತಿ ಕೆ.ಜಿ., ವಿಶ್ವವಿದ್ಯಾಲಯದ ಡೀನರಾದ ಪ್ರೊ.ಸದ್ಯೋಜಾತಪ್ಪ ಎಸ್., ಪ್ರೊ.ಜಿ.ಪಿ ದಿನೇಶ್, ಎಫ್‌ಟಿಸಿಸಿಎಂಕೆಯ ಖಜಾಂಚಿ ಡಾ.ಎಂ ಜಯಪ್ಪ, ಕಾರ್ಯದರ್ಶಿ ಲೂಯಿಸ್ ಮನೋಜ್ ಅಂಬ್ರೋಸ್, ಡಾ.ಎಸ್.ರಮೇಶ್, ವಿವಿಯ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ರವಿ, ಸಂಘದ ಜಿಲ್ಲಾ ಅಧ್ಯಕ್ಷ ಡಾ.ರಾಮಚಂದ್ರ, ಸಂಕಿರಣದ ಸಂಚಾಲಕ ಅಧ್ಯಕ್ಷ ಡಾ.ಹೆಚ್ ರಾಮಕೃಷ್ಣ, ಸಂಕಿರಣದ ಕಾರ್ಯದರ್ಶಿ ಡಾ.ಪ್ರಹ್ಲಾದ್ ಚೌಧ್ರಿ ವೇದಿಕೆಯಲ್ಲಿದ್ದರು.

ಕಾರ್ಯಕ್ರಮವನ್ನು ನಿರ್ವಹಣಾಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ.ನಿರ್ಮಲಾ ನಿರೂಪಿಸಿದರು. ಸಂಘದ ಪದಾಧಿಕಾರಿಗಳು, ಸರ್ವ ಸದಸ್ಯರು ಹಾಗೂ ವಿಶ್ವವಿದ್ಯಾಲಯದ ಎಲ್ಲ ನಿಕಾಯಗಳ ಡೀನರು, ವಿಭಾಗಗಳ ಮುಖ್ಯಸ್ಥರು, ಬೋಧಕ-ಬೋಧಕೇತರ ವರ್ಗ, ಸಂಶೋಧನಾ ವಿದ್ಯಾರ್ಥಿಗಳು ಇದ್ದರು.



ಮಕ್ಕಳಿಗೆ ಶಿಕ್ಷಣ, ಸುರಕ್ಷಿತ ಬಾಲ್ಯ ಒದಗಿಸುವುದು ಎಲ್ಲರ ಕರ್ತವ್ಯ : ತಹಶೀಲ್ದಾರ್ ಜೂಗಲ್ ಮಂಜುನಾಯಕ

ಕಂಪ್ಲಿ,

ಮಕ್ಕಳ ಕೈಗೆ ಸಿಗಬೇಕಿರುವುದು ಪುಸ್ತಕಗಳು ಮತ್ತು ಆಟದ ಸಾಮಗ್ರಿಗಳೇ ಹೊರತು ದುಡಿಮೆಯ ಭಾರವಲ್ಲ. ಪ್ರತಿಯೊಂದು ಮಗುವಿಗೂ ಶಿಕ್ಷಣ ಹಾಗೂ ಸುರಕ್ಷಿತ ಬಾಲ್ಯ ಒದಗಿಸುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಹಶೀಲ್ದಾರ್ ಜೂಗಲ್ ಮಂಜುನಾಯಕ ಹೇಳಿದರು.

ಪಟ್ಟಣದ ಕೊಟ್ಟಾಲ್ ರಸ್ತೆಯ ವಿಜಯನಗರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಕಾರ್ಮಿಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಮುಕ್ತ ಸಮಾಜ ನಿರ್ಮಾಣ ನಮ್ಮೆಲ್ಲರ ಸಂಕಲ್ಪವಾಗಬೇಕು. ಮಕ್ಕಳಿಗೆ ಶಿಕ್ಷಣದ ಹಕ್ಕು ದೊರಕುವಂತೆ ನೋಡಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಕೆಎಸ್‌ಎಸ್‌ವಿಬಿ ಸುಬ್ಬಾರಾವ್ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಭಾಷಣ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಉಪ ಪ್ರಾಚಾರ್ಯ ಸುನೀಲ್ ಮಾಲಿಪಾಟೀಲ್, ಇಒ ಟಿ.ಎಂ. ಬಸವರಾಜ, ಕಾರ್ಮಿಕ ನಿರೀಕ್ಷಕ ಶಿವಶಂಕರ ಬಿ. ತಳವಾರ, ಡಿಇಒ ಕೆ. ವಿಘ್ನೇಶ್, ವಿವಿಧ ಇಲಾಖೆಗಳ ಅಧಿಕಾರಿಗಳಾದ ರಾಘವೇಂದ್ರ, ಪಿ. ಬಸವರಾಜ, ಜ್ಯೋತಿ, ಶ್ರೀಶೈಲಗೌಡ, ರಾಮಾಂಜಿನೇಯ, ತಿಪ್ಪೇಶ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಟ್ರಾಮಾ ಸೆಂಟರ್‌ಗೆ ಡಿಸಿ, ಜಿಲ್ಲಾ ಪಂಚಾಯತ್ ಸಿಇಓ ಭೇಟಿ : ವಿದ್ಯಾರ್ಥಿಗಳ ಆರೋಗ್ಯ ವಿಚಾರಣೆ

ಕಲಬುರಗಿ,ಜೂ.13-

ನಗರದ ಹಳೇ ಎಸ್‌ಪಿ ಕಚೇರಿ ಎದುರಿನ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ತರಗತಿ ಕೊಠಡಿಯಲ್ಲಿ ಶುಕ್ರವಾರ ಮೇಲ್ಛಾವಣಿಯ ಪ್ಲಾಸ್ಟರ್ ಉದುರಿಬಿದ್ದ ಪರಿಣಾಮ ಮೂವರು ವಿದ್ಯಾರ್ಥಿನಿಯರು ಗಾಯಗೊಂಡಿದ್ದು, ಅವರನ್ನು ತಕ್ಷಣವೇ ನಗರದ ಟ್ರಾಮಾ ಸೆಂಟರ್‌ಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.

ಘಟನೆಯ ಮಾಹಿತಿ ತಿಳಿದ ಕೂಡಲೇ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಸಂಕನೂರ್ ಅವರು ಆಸ್ಪತ್ರೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ಆರೋಗ್ಯ ವಿಚಾರಿಸಿದರು. ಈ ವೇಳೆ ವೈದ್ಯರಾದ ಡಾ. ರೇವಣಸಿದ್ದಪ್ಪ ಭೋಸಗಿ ಅವರಿಂದ ಚಿಕಿತ್ಸೆ ಕುರಿತು ಮಾಹಿತಿ ಪಡೆದುಕೊಂಡರು.

ವಿದ್ಯಾರ್ಥಿನಿಯರಿಗೆ ಸಿಟಿ ಸ್ಕ್ಯಾನ್ ಹಾಗೂ ಎಂಆರ್‌ಐ ಪರೀಕ್ಷೆ ನಡೆಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದರು. ಅಗತ್ಯವಿದ್ದಲ್ಲಿ ತಜ್ಞ ವೈದ್ಯರ ಸಲಹೆ ಪಡೆದು ಸೂಕ್ತ ಚಿಕಿತ್ಸೆ ಮುಂದುವರಿಸುವಂತೆ ಜಿಲ್ಲಾಧಿಕಾರಿಗಳು ವೈದ್ಯರಿಗೆ ಸೂಚನೆ ನೀಡಿದರು.

ನಂತರ ಮಾತನಾಡಿದ ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ಗಾಯಗೊಂಡ ಮೂವರು ವಿದ್ಯಾರ್ಥಿನಿಯರಲ್ಲಿ ಒಬ್ಬಳ ತಲೆಗೆ ಹಾಗೂ ಉಳಿದಿಬ್ಬರಿಗೆ ಭುಜ ಮತ್ತು ಬೆನ್ನಿನ ಭಾಗಕ್ಕೆ ಸಣ್ಣಪುಟ್ಟ ಗಾಯಗಳಾಗಿವೆ. ಯಾವುದೇ ಆತಂಕಪಡುವ ಅಗತ್ಯವಿಲ್ಲ. ಮುನ್ನೆಚ್ಚರಿಕಾ ಕ್ರಮವಾಗಿ 24 ಗಂಟೆಗಳ ಕಾಲ ಆಸ್ಪತ್ರೆಯಲ್ಲಿಯೇ ಇರಿಸಿ ನಿಗಾ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಶುಕ್ರವಾರ ಬೆಳಿಗ್ಗೆ ಸುಮಾರು 10.30 ಗಂಟೆಗೆ ತರಗತಿ ನಡೆಯುತ್ತಿದ್ದ ವೇಳೆ ಮೇಲ್ಛಾವಣಿಯ ಪ್ಲಾಸ್ಟರ್ ಉದುರಿಬಿದ್ದ ಪರಿಣಾಮ ಪ್ರಥಮ ವರ್ಷದ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯರಾದ ಶೀತಲ ಬಸವರಾಜ, ದಿವ್ಯ ಸುಭಾಷ ಹಾಗೂ ಸ್ನೇಹಾ ಕಾಶಿನಾಥ ಗಾಯಗೊಂಡಿದ್ದಾರೆ. ಕಾಲೇಜು ಸಿಬ್ಬಂದಿ ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕಲ್ಪಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಕಟ್ಟಡದ ಸುರಕ್ಷತೆ ಕುರಿತು ಮುನ್ನೆಚ್ಚರಿಕಾ ಕ್ರಮಗಳನ್ನು ಏಕೆ ಕೈಗೊಳ್ಳಲಾಗಿಲ್ಲ ಎಂಬ ಬಗ್ಗೆ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ಈ ಸಂದರ್ಭದಲ್ಲಿ ಡಿಡಿಪಿಯು ಸುರೇಶ ಅಕ್ಕಣ್ಣ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಜಾಥ: ರಾರಾಜಿಸಿದ ಜಾಗೃತಿ ಫಲಕಗಳು

ಶಿಕ್ಷಣ ಪ್ರತಿಯೊಬ್ಬ ಮಗುವಿನ ಮೂಲಭೂತ ಹಕ್ಕು: ನ್ಯಾ.ಸಿದ್ದಲಿಂಗ ಪ್ರಭು



ಬಳ್ಳಾರಿ,ಜೂ.13-

ಹೆಣ್ಣಾಗಲಿ ಅಥವಾ ಗಂಡಾಗಲಿ, ಪ್ರತಿಯೊಬ್ಬ ಮಗುವಿಗೂ ಮೂಲಭೂತ ಶಿಕ್ಷಣ ಪಡೆಯುವ ಹಕ್ಕಿದೆ. ಇದನ್ನು ಯಾವುದೇ ಕಾರಣಕ್ಕೂ ಯಾರು ಕಸಿದುಕೊಳ್ಳಬಾರದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಸಿದ್ದಲಿಂಗ ಪ್ರಭು ಅವರು ಹೇಳಿದರು.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿ ಅವರು ಮಾತನಾಡಿದರು.

ಸಂವಿಧಾನದಡಿ ಪ್ರತಿಯೊಬ್ಬ ಮಗುವಿಗೂ ವಿದ್ಯಾಭ್ಯಾಸ ಪಡೆಯುವ ಮೂಲಭೂತ ಹಕ್ಕನ್ನು ನೀಡಲಾಗಿದೆ. ಬಾಲಕಾರ್ಮಿಕ ಪದ್ಧತಿಯನ್ನು ತಡೆಯಲು ಮತ್ತು ಮಕ್ಕಳಿಗೆ ಶಿಕ್ಷಣ ಒದಗಿಸಲು ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳಡಿ ಪ್ರತಿ ಮಗುವಿಗೂ ಕಡ್ಡಾಯವಾಗಿ ಮೂಲಭೂತ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಮತ್ತು ಸಮಾಜದ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಹಿಂದಿನ ದಿನಗಳಿಗೆ ಹೋಲಿಸಿದರೆ ಪ್ರಸ್ತುತ ದಿನಗಳಲ್ಲಿ ಬಾಲಕಾರ್ಮಿಕ ಪದ್ಧತಿ ಗಣನೀಯವಾಗಿ ಕಡಿಮೆಯಾಗಿದೆ. ಆದಾಗ್ಯೂ, ಇದು ಸಮಾಜದಿಂದ ಸಂಪೂರ್ಣವಾಗಿ ತೊಲಗಿಲ್ಲ. ಇಂದಿಗೂ ಸಮಾಜದ ಕೆಲವು ಮೂಲೆಗಳಲ್ಲಿ, ಕಣ್ಣಿಗೆ ಕಾಣಿಸದಂತೆ ಅಥವಾ ಕಾನೂನಿನ ಕಣ್ಣು ತಪ್ಪಿಸಿ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿದೆ. ಅಂತಹ ಜಾಗಗಳನ್ನು ಗುರುತಿಸಿ, ಅಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಪತ್ತೆ ಹಚ್ಚಿ, ಅವರನ್ನು ಬಾಲಕಾರ್ಮಿಕ ಪದ್ಧತಿಯಿಂದ ಮುಕ್ತಗೊಳಿಸಬೇಕು. ತದನಂತರ ಅವರನ್ನು ಶಿಕ್ಷಣದ ಮುಖ್ಯವಾಹಿನಿಗೆ ತರುವುದು ನಮ್ಮೆಲ್ಲರ ಮುಖ್ಯ ಉದ್ದೇಶವಾಗಬೇಕು ಎಂದು ಅವರು ಕರೆ ನೀಡಿದರು.

ನಾಗರಿಕರು ಕೇವಲ ಸರ್ಕಾರದ ಉದ್ಯೋಗಗಳ ಮೇಲಷ್ಟೇ ಅವಲಂಬಿತರಾಗದೆ, ಸರ್ಕಾರದ ವಿವಿಧ ಸ್ವಯಂ-ಉದ್ಯೋಗ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಆ ಮೂಲಕ ತಾವೇ ಸ್ವಾವಲಂಬಿಗಳಾಗಿ, ಸಮಾಜದಲ್ಲಿ ಘನತೆಯಿಂದ ಬದುಕುವಂತಾಗಬೇಕು ಎಂದು ಆಶಿಸಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಮಾತನಾಡಿ, ಬಳ್ಳಾರಿ ಜಿಲ್ಲೆಯು ಕೈಗಾರಿಕೆಗಳು, ಇಟ್ಟಿಗೆ ಭಟ್ಟಿಗಳು ಹಾಗೂ ಬಿಡಿ ಕಾರ್ಮಿಕ ವಲಯಗಳಲ್ಲಿ ಗಮನಾರ್ಹವಾಗಿ ಗುರುತಿಸಿಕೊಂಡಿದ್ದು, ಇಂತಹ ಸ್ಥಳಗಳಲ್ಲಿ ಬಾಲಕಾರ್ಮಿಕರನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಮಕ್ಕಳನ್ನು ಶಾಲೆ-ಕಾಲೇಜುಗಳಿಗೆ ಕಳುಹಿಸುವ ಬದಲು ಕಾರ್ಮಿಕರನ್ನಾಗಿ ಮಾಡಿಕೊಳ್ಳುತ್ತಿರುವುದು ತೀರಾ ವಿಷಾದನೀಯ ಸಂಗತಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಕಳೆದ ವರ್ಷ ಕಾರ್ಮಿಕ ಇಲಾಖೆ ಒಳಗೊಂಡು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಹತ್ತಾರು ಕಡೆಗಳಲ್ಲಿ ದಾಳಿ ನಡೆಸಿ, ಸುಮಾರು 58 ಬಾಲಕಾರ್ಮಿಕರನ್ನು ರಕ್ಷಿಸಿದೆ. ರಕ್ಷಿಸಲ್ಪಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವ ಮೂಲಕ, ಅವರು ಸತ್ಪಜೆಗಳಾಗಿ ಬೆಳೆಯಲು ನೆರವಾಗುವಂತಹ ಶ್ಲಾಘನೀಯ ಕಾರ್ಯ ಮಾಡಲಾಗಿದೆ ಎಂದು ತಿಳಿಸಿದರು.


14 ರಿಂದ 18 ವರ್ಷದೊಳಗಿನ ಯಾವುದೇ ಮಗು ಎಲ್ಲಾದರೂ ಕಾರ್ಮಿಕನಾಗಿ ಕೆಲಸ ಮಾಡುತ್ತಿರುವುದು ಗಮನಕ್ಕೆ ಬಂದರೆ, ತಕ್ಷಣ ಸಂಬಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು. ಮಕ್ಕಳನ್ನು ರಕ್ಷಿಸುವುದು ಕೇವಲ ಇಲಾಖೆಯ ಕೆಲಸವಲ್ಲ, ಅದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅವರನ್ನು ಶಾಲೆ-ಕಾಲೇಜುಗಳಿಗೆ ಕಳುಹಿಸಿ, ದೇಶದ ಉತ್ತಮ ಪ್ರಜೆಗಳನ್ನಾಗಿ ರೂಪಿಸಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ವಿನಂತಿಸಿದರು.

ಇದೇ ವೇಳೆ ಚಿಗುರು ಕಲಾ ತಂಡದ ಹುಲುಗಪ್ಪ ಸಂಗಡಿಗರಿದ ಬಾಲಕಾರ್ಮಿಕ ಪದ್ಧತಿ ವಿರೋಧಿ ಕುರಿತ ಜಾಗೃತಿ ಗೀತೆಗಳನ್ನು ಪ್ರಸ್ತುತಪಡಿಸಿದರು.

ಬಳಿಕ ಶಾಲಾ ಮಕ್ಕಳು ಒಳಗೊಂಡ ಜಾಥಾವು ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಪ್ರಾರಂಭಗೊಡು ಗಡಿಗಿ ಚೆನ್ನಪ್ಪ ವೃತ್ತ-ಬೆಂಗಳೂರು ರಸ್ತೆ-ತೇರು ಬೀದಿ ಹಾಗೂ ಹೆಚ್.ಆರ್. ಗವಿಯಪ್ಪ ವೃತ್ತದ ಮಾರ್ಗವಾಗಿ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದವರೆಗೆ ತಲುಪಿತು. ಮಾರ್ಗದುದ್ದಕ್ಕೂ ಮಕ್ಕಳ ಕೈಯಲ್ಲಿ ಜಾಗೃತಿ ಫಲಕಗಳು ರಾರಾಜಿಸಿದವು.

ಈ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ, ಬಳ್ಳಾರಿ ಉಪ ವಿಭಾಗ ಕಾರ್ಮಿಕ ಅಧಿಕಾರಿ ಸಿದ್ದಪ್ಪ ಜಿ. ಖೈನೂರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯ್ಕ ಎಂ., ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂಧೆ ನಂದಿನಿ, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ.ಮೌನೇಶ್, ಕಾರ್ಮಿಕ ನಿರೀಕ್ಷಕರಾದ ರಮೇಶ್(ಬಳ್ಳಾರಿ ವೃತ್ತ-1), ಪರಶುರಾಮ್(ಬಳ್ಳಾರಿ ವೃತ್ತ-2) ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಎನ್‌ಸಿಸಿ ಅಧಿಕಾರಿಗಳು, ಶಾಲಾ- ಕಾಲೇಜು ವಿದ್ಯಾರ್ಥಿಗಳು ಹಾಗೂ ಇನ್ನಿತರರು ಭಾಗವಹಿಸಿದ್ದರು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶಿಕ್ಷಣವೇ ಅಸ್ತ್ರ : ಡಿಸಿ ಸುರೇಶ್ ಇಟ್ನಾಳ



ಕೊಪ್ಪಳ, ಜೂ.13-

ಕಡ್ಡಾಯ ಶಿಕ್ಷಣವು ಪ್ರತಿಯೊಬ್ಬ ಮಗುವಿನ ಕಾನೂನುಬದ್ಧ ಹಕ್ಕಾಗಿದ್ದು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಮೂಲಕವೇ ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬಹುದು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಅಧ್ಯಕ್ಷ ಡಾ. ಸುರೇಶ್ ಬಿ. ಇಟ್ನಾಳ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಯುನಿಸೆಫ್ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂನಲ್ಲಿ ಶುಕ್ರವಾರ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿ ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವ ಸಾಮಾಜಿಕ ಪಿಡುಗಾಗಿದ್ದು, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಾರ್ಮಿಕ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕಿದೆ ಎಂದು ಹೇಳಿದರು. ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಪುನಃ ಶಿಕ್ಷಣದ ಮುಖ್ಯವಾಹಿನಿಗೆ ತರುವುದು ಅಗತ್ಯವಾಗಿದ್ದು, ಇದರಿಂದ ಬಾಲಕಾರ್ಮಿಕ ಪದ್ಧತಿ ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕ್ಷೇತ್ರದಲ್ಲಿ ಹಾಗೂ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರಗಳಲ್ಲಿ ದುಡಿಸಿಕೊಳ್ಳುವುದು ಕಾನೂನುಬಾಹಿರ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಮಕ್ಕಳ ಸಹಾಯವಾಣಿ 1098ಕ್ಕೆ ಮಾಹಿತಿ ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಮಹಾಂತೇಶ ಎಸ್. ದರಗದ, ಮಕ್ಕಳಿಗೆ ಅವರ ಹಕ್ಕುಗಳನ್ನು ಒದಗಿಸುವುದು ಕುಟುಂಬ ಮತ್ತು ಸಮಾಜದ ಜವಾಬ್ದಾರಿಯಾಗಿದೆ ಎಂದರು. ಬಾಲಕಾರ್ಮಿಕರನ್ನು ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದ್ದು, ತಪ್ಪಿತಸ್ಥರಿಗೆ ಎರಡು ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸುವ ಅವಕಾಶ ಕಾನೂನಿನಲ್ಲಿದೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ ಮಾತನಾಡಿ, ಬಾಲಕಾರ್ಮಿಕ ಪದ್ಧತಿ ದೇಶದ ಅಭಿವೃದ್ಧಿಗೆ ಅಡ್ಡಿಯಾಗುವ ಸಾಮಾಜಿಕ ಸಮಸ್ಯೆಯಾಗಿದ್ದು, ''ಬಾಲ ಕಾರ್ಮಿಕ ಪದ್ಧತಿಯ ತಡೆ: ಮಕ್ಕಳಿಗೆ ನ್ಯಾಯಯುತ ಆಟ, ವಯಸ್ಕರಿಗೆ ಯೋಗ್ಯ ಕೆಲಸ'' ಎಂಬ ಈ ವರ್ಷದ ಘೋಷ 'ವಾಕ್ಯವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಾಲ ಕಾರ್ಮಿಕತೆಯಿಂದ ಮುಕ್ತರಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ತಲಾ 2,000 ರೂ. ಪ್ರೋತ್ಸಾಹಧನ ವಿತರಿಸಲಾಯಿತು. ಅಲ್ಲದೆ, ಬಾಲಕಾರ್ಮಿಕರಿಂದ ಮುಕ್ತಗೊಂಡ ಮಕ್ಕಳಿಗೆ 35 ಸಾವಿರ ರೂ. ಮೌಲ್ಯದ ಬಾಂಡ್‌ಗಳು ಹಾಗೂ ಪರಿಹಾರ ಧನದ ಚೆಕ್‌ಗಳನ್ನು ವಿತರಿಸಿ ಸನ್ಮಾನಿಸಲಾಯಿತು.

2 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಶಾಸಕ ಅಲ್ಲಮಪ್ರಭು ಪಾಟೀಲ್ ಗುದ್ದಲಿ ಪೂಜೆ



ಕಲಬುರಗಿ,ಜೂ.13-

ಗ್ರಾಮೀಣ ಪ್ರದೇಶಗಳ ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ 2025-26ನೇ ಸಾಲಿನ 5054 ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವ ಕಲಬುರಗಿ ಆಳಂದ ಮುಖ್ಯ ರಸ್ತೆಯಿಂದ ಹುಲಿಗೆಮ್ಮ ದೇವಸ್ಥಾನ ಮಾರ್ಗವಾಗಿ ಹತಗುಂದ ಸಂಪರ್ಕ ರಸ್ತೆ ನಿರ್ಮಾಣ ಕಾಮಗಾರಿಗೆ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಗುರುವಾರ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ಹತಗುಂದ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಸುಗಮ ಹಾಗೂ ಸುರಕ್ಷಿತ ಸಂಚಾರ ವ್ಯವಸ್ಥೆ ದೊರೆಯಲಿದೆ. ಇದರಿಂದ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ.

ಗುದ್ದಲಿ ಪೂಜೆ ಬಳಿಕ ಮಾತನಾಡಿದ ಶಾಸಕ ಅಲ್ಲಮಪ್ರಭು ಪಾಟೀಲ್, ರಾಜ್ಯ ಸರ್ಕಾರ ಗ್ರಾಮೀಣ ಭಾಗಗಳ ಸಮಗ್ರ ಅಭಿವೃದ್ಧಿಗೆ ಬದ್ಧವಾಗಿದ್ದು, ಉತ್ತಮ ಗುಣಮಟ್ಟದ ರಸ್ತೆ, ಕುಡಿಯುವ ನೀರು, ಒಳಚರಂಡಿ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ ಎಂದು ಹೇಳಿದರು.

ಗ್ರಾಮೀಣ ರಸ್ತೆ ಅಭಿವೃದ್ಧಿಯಿಂದ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದ್ದು, ಶಿಕ್ಷಣ, ಆರೋಗ್ಯ ಹಾಗೂ ವ್ಯಾಪಾರ ಚಟುವಟಿಕೆಗಳಿಗೂ ಅನುಕೂಲವಾಗಲಿದೆ. ಕ್ಷೇತ್ರದ ಜನರ ನಿರೀಕ್ಷೆಗಳಿಗೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಹುಲಿಗೆಮ್ಮ ದೇವಸ್ಥಾನದ ಶ್ರೀಗಳು, ಬಾಬು ಒಂಟಿ, ಸಂತೋಷ ಪಾಟೀಲ್ ಡಣ್ಣೂರ, ಲಿಂಗರಾಜ ಕಣ್ಣಿ, ಬಸವರಾಜ ಪಾಟೀಲ, ಅಪಾರಾವ ಪಟ್ಟಣ, ಮಹಾಂತಗೌಡ ಪಾಟೀಲ, ಗೌಡಪ್ಪಗೌಡ ಪಾಟೀಲ, ಚನ್ನಪ್ಪ ಮರಬ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಮೆಟ್ರಿಕ್ ಪೂರ್ವ ವಸತಿ ನಿಲಯ ಉಳಿಸಲು ಎಐಡಿಎಸ್‌ಓ ಪ್ರತಿಭಟನೆ

ವಿದ್ಯಾರ್ಥಿಯ ಮೂಲಭೂತ ಹಕ್ಕು. ವಿದ್ಯಾರ್ಥಿಗಳ ಸಂಖ್ಯೆ ಆಧರಿಸಿ ಲಾಭ-ನಷ್ಟದ ಲೆಕ್ಕಾಚಾರ ಮಾಡದೆ, ಈಗಿರುವ ಎಲ್ಲಾ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಮುಂದುವರಿಸಬೇಕು'' ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಬಸವರಾಜ ಮಾತನಾಡಿ, ವಸತಿ ನಿಲಯಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸುವುದರ ಜೊತೆಗೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿ ಪ್ರವೇಶಾತಿ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯ ಬಳಿಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರಿಗೆ ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು. ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಉಳಿಸಿ, ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವಂತೆ ಎಐಡಿಎಸ್‌ಓ ಹಾಗೂ ವಿದ್ಯಾರ್ಥಿಗಳು ಸರ್ಕಾರಕ್ಕೆ ಒತ್ತಾಯಿಸಿದರು.

ಫಿಟ್‌ನೆಸ್ ಶುಲ್ಕ ಕಡಿತ ಟೋಲ್ ವಿನಾಯಿತಿ ಸೇರಿ ಹಲವು ಬೇಡಿಕೆಗಳ ಮಂಡನೆ

ವೆಚ್ಚ ಏರಿಕೆಯಿಂದ ಸಂಕಷ್ಟದಲ್ಲಿರುವ ಲಾರಿ ಉದ್ಯಮ ಉಳಿವಿಗಾಗಿ ಬಾಡಿಗೆಯನ್ನು ಶೇ.15ರಿಂದ 20ರಷ್ಟು ಹೆಚ್ಚಿಸುವ ಪ್ರಸ್ತಾವನೆಯನ್ನೂ ಸಭೆಯಲ್ಲಿ ಮಂಡಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸುರೇಶ ಸಿಂಗಾನಳ, ಹಸನ್, ಅಜಿಮ್ ಪಾಷಾ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಭರವಸೆಗಳನ್ನು ಸಿ.ಎಂ. ಡಿ.ಕೆ. ಶಿವಕುಮಾರ್ ಈಡೇರಿಸಬೇಕು-ಎ. ನರಸಿಂಹಮೂರ್ತಿ

ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಜನಾರ್ಧನ ಹಳ್ಳಿಬೆಂಚಿ ಪದಗ್ರಹಣ ಮಾಡಿ ಮಾತನಾಡಿ ಇದುವರೆಗೂ ರಾಯಚೂರು ಸ್ಲಂ ಜನರ ಕ್ರಿಯಾ ವೇದಿಕೆ 4 ಸಾವಿರ ಜನರಿಗೆ ಹಕ್ಕುಪತ್ರ ದೊರಕಿಸಿದ್ದು, ಅಂದಾಜು 1 ಸಾವಿರ ಜನರಿಗೆ ನಿವೇಶನದ ಮನೆ ಸಂಖ್ಯೆ 12 ಸ್ಲಂ ಘೋಷಣೆ ಮಾಡಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ 6 ಸಾವಿರ ಸ್ಲಂ ಜನರಿಗೆ ಹಕ್ಕುಪತ್ರ ದೊರಕಿಸಬೇಕು. 20 ಸ್ಲಂಗಳ ಘೋಷಣೆ ಮಾಡಿಸಿದ ಜವಾಬ್ದಾರಿ ನಮ್ಮ ಮೇಲಿದ. 1636 ವಿಶೇಷ ವರ್ಗದವರಿಗೆ ವಸತಿ ದೊರಕಿಸಬೇಕು. ನಗರಪಾಳಿಕೆಯ ಅನುದಾನದಲ್ಲಿ ಶೇ.20% ಸ್ಲಂಗಳ ಅಭಿವೃದ್ಧಿ ಪಡಿಸುವ ಜೊತೆಗೆ ಮಹಣಗರ ಪಾಳಿಕೆಯ ಸ್ಲಂ ನಿವಾಸಿಗಳು ಆಯ್ಕೆ ಯಾಗದಂತೆ ವಂಚಿತರಾಗಿದ್ದಾರೆ ಎಂದರು.

ಕಂಚು ಮಾರೆಮ್ಮ ದೇವಿ ಜಾತ್ರಾ ಮಹೋತ್ಸ ವದ ಅಂಗವಾಗಿ ಕ್ರಿಕೆಟ್ ಪಂದ್ಯಾ

ತಿಳಿಸಿದರು ನಡೆಯಲಿದ್ದು ಅದರಲ್ಲಿ ಪ್ರತಿಯೊಬ್ಬರು ಭಾಗವಹಿಸಲು ಕೋರಿದರು.

ಹರಿಜನವಾಡದ ವಾರ್ಡ್ ನಂಬರ್ 19 20 21 ಯುವಕರು ಭಾಗವಹಿಸುತ್ತಾರೆ ಸುಮಾರು ವರ್ಷಗಳಿಂದ ಜಾತ್ರಾ ಮಹೋತ್ಸ ವ ಅಂಗವಾಗಿ ಕ್ರೀಡೆಗಳು ನಡೆಯುತ್ತಿವೆ ಎಂದರು. ನಂದಕುಮಾರ್ ಮಾಡಿಗಿರಿ ಇವರ ನೇತೃತ್ವದಲ್ಲಿ ಕ್ರಿಕೇಟ ಪಂದ್ಯಾವಳಿಗಳು ನಡೆಯುತ್ತಿವೆ. ಆಟದಲ್ಲಿ ಸೋಲು ಗೆಲುವು ಮುಖ್ಯವಲ್ಲ. ಸ್ಪೂರ್ತಿಯಿಂದ ಆಟವಾಡಲು ಉರುಕುಂದಪ್ಪ ಸಲಹೆ ನೀಡಿದರು.

ಕ್ರಿಕೆಟ್ ಕ್ರೀಡಾಪಟುಗಳಿಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. .ಈ ಸಂದರ್ಭದಲ್ಲಿ ಹುಲಿಗೆಪ್ಪ ಮಾಡಗಿರಿ ಜಿಲ್ಲಾ ಸಂಘಟನೆ ಕಾರ್ಯದರ್ಶಿ ಇತರರು ಇದ್ದರು.

ಯೋಗ ದಿನಾಚರಣೆಗೆ ಅಗತ್ಯ ಸಿದ್ಧತೆ ಕೈಗೊಳಿ: ಸಹಾಯಕ ಆಯುಕ್ತ ಡಾ.ಹಂಪಣ್ಣ

ಕಾಪಾಡಿಕೊಳ್ಳಬಹುದು. ಆರೋಗ್ಯ ರಕ್ಷಣೆಗೆ ಯೋಗ ಅತ್ಯುತ್ತಮ ಸಾಧನವಾಗಿದ್ದು, ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಎಂದರು.

ಅದು ಬೆಳಿಗ್ಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ,ಕಾಲೇಜು ವಿದ್ಯಾರ್ಥಿಗಳು ಹಾಗೂ ವಿವಿಧ ಸಂಸ್ಥೆಗಳ ಯೋಗ ಆಸಕ್ತರು ಭಾಗವಹಿಸಲಿದ್ದು, ಜೂನ್ 18 ಮತ್ತು 19ರಂದು ಯೋಗ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಬೇಕು. ಕಾರ್ಯಕ್ರಮದ ಯಶಸ್ವಿಗಾಗಿ ವಿವಿಧ ಇಲಾಖೆಗಳಿಗೆ ವಿವಿಧ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗಿದ್ದು, ಅವುಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕೆಂದು ಸಂಬಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸಹಾಯಕ ಆಯುಕ್ತರು ಸೂಚಿಸಿದರು.

ಯೋಗ ನಡೆಯುವ ಸ್ಥಳದಲ್ಲಿ ಆಂಬುಲೆನ್ಸ್, ಕುಡಿಯುವ ನೀರು ಹಾಗೂ ಇನ್ನಿತರ ಮೂಲ ಸೌಕರ್ಯಗಳನ್ನು ಒದಗಿಸಬೇಕು. ಮಹಾನಗರ ಪಾಲಿಕೆಯಿಂದ ಸ್ವಚ್ಚತೆ ಹಾಗೂ ನೀರಿನ ವ್ಯವಸ್ಥೆ ಹಾಗೂ ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲ ಇಲಾಖೆಯ ಅಧಿಕಾರಿ, ಸಿಬ್ಬಂದಿಯವರು, ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ತಮಗೆ ಅನುಕೂಲಕರವಾದ ಸಮಯದಲ್ಲಿ ಆನ್‌ಲೈನ್ ಮೂಲಕ ಯೋಗ ತರಬೇತಿಯನ್ನು ಪಡೆಯಬಹುದು. ಆನ್‌ಲೈನ್ ಮೂಲಕ ಯೋಗ ತರಬೇತಿಗೆ ನೋಂದಾಯಿಸಿಕೊಡು ಯೋಗಾಭ್ಯಾಸ ಮಾಡಬಹುದು ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆಯುಷ್ ಇಲಾಖೆಯ ಅಧಿಕಾರಿ ಡಾ.ಶಂಕರಗೌಡ ಎಸ್.ಪಾಟೀಲ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪ್ರವೀಣ ಕುಮಾರ್, ಪದವಿ ಪೂರ್ವ ಕಾಲೇಜಿನ ಉಪ ನಿರ್ದೇಶಕ ಸೋಮಶೇಖರಪ್ಪ ಹೋಕ್ರಾಣಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಸುನೀತಾ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ ನಾಯಕ, ಆಹಾರ ಇಲಾಖೆ ವ್ಯವಸ್ಥಾಪಕ ಹರೀಶ್ ಡಿ., ರಾಯಚೂರು ಮಹಾನಗರ ಪಾಲಿಕೆಯ ಸಮುದಾಯ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ ಸೇರಿದಂತೆ ವಿವಿಧ ಸಂಘ, ಸಂಸ್ಥೆಯ ಮುಖಂಡರು ಸಭೆಯಲ್ಲಿ ಇದ್ದರು.



ಗ್ಯಾಸ್, ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಖಂಡಿಸಿ ಪ್ರತಿಭಟನೆ

ಕಲಬುರಗಿ,ಜೂ.13-

ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಸೇರಿದಂತೆ ದಿನನಿತ್ಯ ಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸದಸ್ಯರು ನಗರದ ಜಗತ್ ವೃತ್ತದಲ್ಲಿ ಸೌದೆ ಒಲೆ ಹಚ್ಚಿ ಅಡುಗೆ ಮಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಮಾತನಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿಯನ್ನು ನೆಪವನ್ನಾಗಿ ಮಾಡಿಕೊಂಡು ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಹಾಕಲಾಗುತ್ತಿದೆ ಎಂದು ಆರೋಪಿಸಿದರು. ನಿರಂತರವಾಗಿ ಇಂಧನ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವುದರಿಂದ ಬಡವರು ಹಾಗೂ ಮಧ್ಯಮ ವರ್ಗದ ಕುಟುಂಬಗಳ ಜೀವನ ಸಂಕಷ್ಟಕ್ಕೆ ಸಿಲುಕಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಉಜ್ವಲ ಯೋಜನೆಯಡಿ ಪೂರೈಸಲಾಗುತ್ತಿದ್ದ ಅಡುಗೆ ಅನಿಲ ಸಿಲಿಂಡರ್‌ಗಳ ಸಂಖ್ಯೆಯನ್ನು ಕಡಿತಗೊಳಿಸಿರುವುದು ಜನಸಾಮಾನ್ಯರಿಗೆ ಮತ್ತಷ್ಟು ತೊಂದರೆ ಉಂಟುಮಾಡಿದೆ. ಹಿಂದೆ ವರ್ಷಕ್ಕೆ ಸರಾಸರಿ ಒಂಬತ್ತು ಸಿಲಿಂಡರ್‌ಗಳು ದೊರೆಯುತ್ತಿದ್ದರೆ, ಈಗ ನಾಲ್ಕಕ್ಕೆ ಇಳಿಕೆಯಾಗಿದೆ ಎಂದು ದೂರಿದರು.

ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಹಾಗೂ ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕು. ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಸರ್ಕಾರ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು. ಜೊತೆಗೆ ಮೂಲಭೂತ ವಸ್ತುಗಳ ಪೂರೈಕೆಯಲ್ಲಿ ಯಾವುದೇ ಕೊರತೆ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯ ಮೂಲಕ ಸರ್ಕಾರ ಜನಸಾಮಾನ್ಯರ ಸಂಕಷ್ಟಕ್ಕೆ ಸ್ಪಂದಿಸಿ ಬೆಲೆ ಏರಿಕೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಸಂಘಟನೆಯ ಸದಸ್ಯರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷೆ ಪದ್ಮಿನಿ ಕಿರಣಗಿ, ಚಂದಮ್ಮ ಗೋಳಾ, ಸುಜಾತ ಕಡಳ್ಳಿ, ಜಯಶ್ರೀ ಬೆನ್ನೂರ್, ಶಶಿಕಲಾ ಕಡಗಂಚಿ, ಸಮೀನಾ ಬಾನು, ಮಲ್ಲಮ್ಮ ಕಿರಣಗಿ, ತೇಜಮ್ಮ ಕವಾಲೆ, ಸಿದ್ದಮ್ಮ, ನಾಗಮ್ಮ ಮತ್ತಿತ್ತರರು ಉಪಸ್ಥಿತರಿದ್ದರು.

ಮಾತೃಭಾಷೆಯ ಅಭಿಮಾನಿಗಳಿಂದಲೇ ಕಲೆ-ಸಾಹಿತ್ಯ ಉಳಿವು: ಅಪ್ಪಾರಾವ ದೇವಿ ಮುತ್ಯಾ



ಕಲಬುರಗಿ,ಜೂ.13-

ಮಾತೃಭಾಷೆಯ ಬಗ್ಗೆ ಪ್ರೀತಿ, ಅಭಿಮಾನ ಮತ್ತು ತುಡಿತ ಹೊಂದಿರುವವರೇ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸುತ್ತಾರೆ ಎಂದು ಶ್ರೀನಿವಾಸ ಸರಡಗಿ ಮಹಾಲಕ್ಷ್ಮೀ ಶಕ್ತಿ ಪೀಠದ ಅಪ್ಪಾರಾವ ದೇವಿ ಮುತ್ಯಾ ಹೇಳಿದರು.

ನಗರದ ಕನ್ನಡ ಭವನದಲ್ಲಿ ಕ್ರಿಯಾಶೀಲ ಗೆಳೆಯರ ಬಳಗ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗುರುವಾರ ಆಯೋಜಿಸಿದ್ದ ವಿಜಯ ಜನ್ಮೋತ್ಸವ ಕನ್ನಡ ಜಾಣರ ಕಣ ವಿಶೇಷ ಕಾರ್ಯಕ್ರಮ ಹಾಗೂ ಸಾಹಿತಿ ಡಾ. ಜಗನ್ನಾಥ ತರನಳ್ಳಿ ವಿರಚಿತ ಜ್ಯೋತಿ ಬೆಳಗುತಿದೆ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸುತ್ತಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರ ಸೇವೆಯನ್ನು ಶ್ಲಾಘಿಸಿದ ಅವರು, ಜಿಲ್ಲೆಯ ಇತಿಹಾಸ, ಸಂಸ್ಕೃತಿ ಹಾಗೂ ಕನ್ನಡದ ಅಸ್ಮಿತೆಯನ್ನು ಜನಸಾಮಾನ್ಯರ ನಡುವೆ ತಲುಪಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಾಧ್ಯಾಪಕ ಡಾ. ಬಾಬುರಾವ ಶೇರಿಕಾರ, ಕಳೆದ ಮೂರು ದಶಕಗಳಿಂದ ನಾಡು-ನುಡಿಯ ಸೇವೆಯಲ್ಲಿ ತೊಡಗಿಕೊಂಡಿರುವ ವಿಜಯಕುಮಾರ ತೇಗಲತಿಪ್ಪಿ ಅವರು ಕನ್ನಡದ ಕೈಂಕರ್ಯದ ಮೂಲಕ ಕನ್ನಡಿಗರ ಮನ ಗೆದ್ದಿದ್ದಾರೆ ಎಂದು ಹೇಳಿದರು. ಅವರ ಕಾರ್ಯಗಳಿಗೆ ಕನ್ನಡಾಭಿಮಾನಿಗಳು ಇನ್ನಷ್ಟು ಬೆಂಬಲ ನೀಡಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ಕ್ರಿಯಾಶೀಲ ಗೆಳೆಯರ ಬಳಗದ ಸಹಕಾರದಿಂದ ಜಿಲ್ಲೆಯಲ್ಲಿ ಅನೇಕ ಸಾಹಿತ್ಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲು ಸಾಧ್ಯವಾಗಿದೆ. ಕನ್ನಡ ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಚಾರಕ್ಕಾಗಿ ಇನ್ನಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉತ್ಸಾಹ ಇಮ್ಮಡಿಗೊಂಡಿದೆ ಎಂದು ತಿಳಿಸಿದರು.

ಸಾಹಿತಿ ಡಾ. ಜಗನ್ನಾಥ ತರನಳ್ಳಿ ವಿರಚಿತ ಜ್ಯೋತಿ ಬೆಳಗುತಿದೆ ಕೃತಿಯನ್ನು ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಬಿ.ಎಸ್. ದೇಸಾಯಿ ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವೀರಶೈವ ಸಮಾಜದ ಉಪಾಧ್ಯಕ್ಷ ಕಲ್ಯಾಣಪ್ಪ ಪಾಟೀಲ ಮಳಖೇಡ ಸೇರಿದಂತೆ ಹಲವು ಗಣ್ಯರು ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮಹತ್ವದ ಕುರಿತು ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರಿಗೆ ಕನ್ನಡ ಪ್ರಿಯ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಅನೇಕ ಗಣ್ಯರಿಗೆ ಚಿರ ಗೌರವ ಹಾಗೂ ಜನಮಣಿ ಗೌರವ ಪುರಸ್ಕಾರಗಳನ್ನು ಪ್ರದಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಜಯಶ್ರೀ ಮತ್ತಿಮಡು, ಶಿವರಾಜ ಅಂಡಗಿ, ಧರ್ಮಣ್ಣ ಎಚ್. ಧನ್ನಿ, ಶರಣರಾಜ ಛಪ್ಪರಬಂದಿ, ಡಾ. ಲಿಂಗರಾಜ ಸಿರಗಾಪೂರ, ಸೋಮಶೇಖರ ಮಾಲಿಪಾಟೀಲ ತೇಗಲತಿಪ್ಪಿ, ಸೈಯ್ಯದ್ ನಜಿರುದ್ದಿನ್ ಮುತ್ತವಲ್ಲಿ, ಧರ್ಮರಾಜ ಜವಳಿ, ಕಲ್ಯಾಣಕುಮಾರ ಶೀಲವಂತ, ವಿದ್ಯಾಸಾಗರ ದೇಶಮುಖ, ಶಕುಂತಲಾ ಪಾಟೀಲ, ದಿನೇಶ ಮದಕರಿ, ಗಣೇಶ ಚಿನ್ನಾಕಾರ, ಜ್ಯೋತಿ ಕೋಟನೂರ,ಕಲಾವಿದರು ಮತ್ತು ಗಣ್ಯರು ಭಾಗವಹಿಸಿದ್ದರು.

ಆಡಳಿತ ಮತ್ತು ಸರ್ಕಾರದ ವಿಳಂಬ ನೀತಿಗೆ ಖಂಡನೆ: 11ನೇ ದಿನಕ್ಕೆ ಕಾಲಿಟ್ಟ ಪ್ರತಿಭಟನೆ

ಮೆಡಿಕಲ್ ಅನ್‌ಫಿಟ್,ಹೊಸ ವೇತನ ಒಪ್ಪಂದ,ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕಪ್ಪು ಬಾವುಟ ಪ್ರತಿಭಟನೆ

ಹಟ್ಟಿಚಿನ್ನದ ಗಣ:ಜೂನ್ 13: ಹಟ್ಟಿ ಚಿನ್ನದ ಗಣಿ ಕಂಪನಿ ಅಡಳಿತ ಮತ್ತು ಸಕಾ9ರದ ವಿಳಂಬ ನೀತಿಯನ್ನು ಖಂಡಿಸಿ ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಪ್ರಮುಖ ಬೇಡಿಕೆಗಳಾದ ಮೆಡಿಕಲ್ ಅನ್‌ಫಿಟ್ ಯೋಜನೆಯನ್ನು ಕೂಡಲೇ ಜಾರಿಗೊಳಿಸುವುದು,ಹೊಸ ವೇತನ ಒಪ್ಪಂದವನ್ನು ಅನುಷ್ಠಾನಗೊಳಿಸುವುದು ಸೇರಿದಂತೆ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಕಪ್ಪು ಬಾವುಟ ಪ್ರತಿಭಟನೆಯು 11ನೇ ದಿನಕ್ಕೆ ಕಾಲಿಟ್ಟಿದೆ.



ಕಾರ್ಮಿಕರು ಕಪ್ಪು ಪಟ್ಟಿ ಧರಿಸಿ ಹಾಗೂ ಕಪ್ಪು ಬಾವುಟಗಳನ್ನು ಹಿಡಿದು ಪ್ರತಿಭಟಿಸುವ ಮೂಲಕ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದ ಕಾರ್ಮಿಕರು,ಆಡಳಿತ ಮಂಡಳಿ ಮತ್ತು ಸರ್ಕಾರದ ವಿಳಂಬ ನೀತಿಯನ್ನು ತೀವ್ರವಾಗಿ ಖಂಡಿಸಿದರು.

ಈಗಾಗಲೇ ಬಾಕಿ ಇರುವ ಆಹಾರ ಪೊಟ್ಟಣ(ಫುಡ್ ಕಿಟ್)ವಿತರಣೆ,ಮನೆ ಬಾಡಿಗೆ ಭತ್ಯೆ(),ಉತ್ಪಾದನಾ ಲಿಂಕ್ಡ್ ಪ್ರೋತ್ಸಾ ಹಧನ () ಹಾಗೂ ಎಕ್ಸ್ ಗ್ರೇಷಿಯಾ ಸೌಲಭ್ಯಗಳನ್ನು ನೀಡುವುದು ಸೇರಿವೆ.

ಕಾರ್ಮಿಕರ ಹಕ್ಕುಗಳು ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಹಾಗೂ ಆಡಳಿತದ ಗಮನ ಸೆಳೆಯಲು ಹಂತ ಹಂತವಾಗಿ ಪ್ರತಿಭಟನೆಗಳನ್ನು ನಡೆಸುತ್ತಿದ್ದರೂ,ಸಮಸ್ಯೆಗಳ ಪರಿಹಾರಕ್ಕೆ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿಯಾಗಿದೆ ಎಂದು ಸಂಘದ ಮುಖಂಡರು ಆರೋಪಿಸಿದರು.

ಇತ್ತೀಚೆಗೆ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ನಿರಂತರ ಒತ್ತಾಯದ ಫಲವಾಗಿ ಜೂನ್ 2025ರಿಂದ ಫೆಬ್ರವರಿ 2026ರವರೆಗೆ ಬಾಕಿ ಇರುವ 12 ತಿಂಗಳ ಆಹಾರ ಪೊಟ್ಟಣಗಳನ್ನು ಹಂತ ಹಂತವಾಗಿ ವಿತರಿಸಲು ಆಡಳಿತ ಒಪ್ಪಿಗೆ ನೀಡಿರುವುದು ಕಾರ್ಮಿಕರ ಹೋರಾಟದ ಮೊದಲ ಗೆಲುವಾಗಿದೆ ಎಂದು ಸಂಘ ತಿಳಿಸಿದೆ.ಆದಾಗ್ಯೂ ಉಳಿದ ಪ್ರಮುಖ ಬೇಡಿಕೆಗಳ ಕುರಿತು ಇನ್ನೂ ಸ್ಪಷ್ಟ ನಿರ್ಧಾರ ಪ್ರಕಟವಾಗದಿರುವುದರಿಂದ ಹೋರಾಟ ಮುಂದುವರಿಸಲಾಗುತ್ತಿದೆ ಎಂದು ತಿಳಿಸಲಾಯಿತು.

ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಕೂಡಲೇ ಈಡೇರಿಸಿ ಹೋರಾಟಕ್ಕೆ ಅಂತ್ಯ ಹಾಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಸಂಘದ ಮುಖಂಡರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಅನ್ವರಿ,ಕಾರ್ಯದರ್ಶಿಗಳಾದ ವೆಂಕೋಬ ಮಿಯ್ಯಾಪೂರು, ಗೌಸ್ ಮಿಯಾ, ಜವಂದಗಿ ರವೀಶ ಬಾಬು, ನಾಗರಾಜ್, ಸಿದ್ದಪ್ಪ ಮುಂಡರಗಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಬಾಬು ಸಾಗರ್, ಮುನೀರುದ್ದೀನ್, ಹನುಮಂತಗೌಡ, ಗುಂಡಪ್ಪಗೌಡ, ಗುರುರಾಜ್, ಸಿಐಟಿಯು ಜಿಲ್ಲಾ ಸಮಿತಿ ಜಂಟಿ ಕಾರ್ಯದರ್ಶಿ ರಮೇಶ ವೀರಾಪೂರು,ಮೈನುದ್ದೀನ್, ಎಐಟಿಯುಸಿ ಮುಖಂಡ ಸಂಗಯ್ಯಸ್ವಾಮಿ,ಸಿಐಟಿಯು ಮುಖಂಡರಾದ ಫಕೃದ್ದೀನ್, ವೆಂಕಟೇಶ ಗೋರ್ ಕಲ್, ಪೆಂಚಲಯ್ಯ,ಬಾಬು ಭೂಪೂರು ,ಸೋಮಣ್ಣ ನಾಯಕ್,ರಾಜೇಶ್ವರಿ, ಹನುಮಂತ್ರಾಯ,ಹುಸೇನ್ ಬಾಷಾ, ಬಸವರಾಜ್ ಎಂ.ಎಂ.,ದುರಗಪ್ಪ,ಶ್ರೀಧರ್, ಅಲ್ಲಾಭಕ್ಷ, ಯಮನೂರು, ರಾಜ್ ಮಹ್ಮದ್,ಖಾಜಾ,ರಫಿ ಮಲ್ಲಾಪೂರು,ಬಸವರಾಜ್ ನಗನೂರು,ಅಲೆಕ್ಸಾಂಡರ್, ಸೇರಿದಂತೆ ಸಿಐಟಿಯು, ಎಐಟಿಯುಸಿ ಹಾಗೂ ಇತರೆ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಮತ್ತು ಕಾರ್ಮಿಕರು ಉಪಸ್ಥಿತರಿದ್ದರು.

ಅಸ್ಸಾಮ್‌ನಲ್ಲಿ ಸೇನಾವಿಮಾನ ಪತನ, ಐವರು ಯೋಧರು ಹುತಾತ್ಮ



ಗುವಾಹಟಿ, ಜೂ.13-

ಅಸ್ಸಾಂನ ಜೋರ್ಹತ್ ವಾಯುನೆಲೆಯಲ್ಲಿ ಭಾರತೀಯ ವಾಯುಪಡೆಯ () ಎಎನ್-32 ಸರಕು ಸಾಗಣೆ ವಿಮಾನ ಅಪಘಾತಕ್ಕೀಡಾಗಿದ್ದು, ಈ ದುರ್ಘಟನೆಯಲ್ಲಿ ಪೈಲಟ್ ಸೇರಿದಂತೆ ಐವರು ಯೋಧರು ಹುತಾತ್ಮರಾಗಿದ್ದಾರೆ ಎಂದು ವರದಿಯಾಗಿದೆ.

ಮಿಲಿಟರಿ ವಾಯುನೆಲೆಯೊಳಗೆ ವಿಮಾನವು ಯಶಸ್ವಿಯಾಗಿ ಲ್ಯಾಂಡಿಂಗ್ ಆದ ಬೆನ್ನಲ್ಲೇ ಅದರಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದೆ. ಆರಂಭಿಕ ಮಾಹಿತಿಯ ಪ್ರಕಾರ, ರನ್‌ವೇ ಮೇಲೆ ಇಳಿದ ತಕ್ಷಣವೇ ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದ್ದು, ತಕ್ಷಣವೇ ವಾಯುಪಡೆಯ ತುರ್ತು ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ಕೈಗೊಂಡಿವೆ.

ಅಪಘಾತದ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಘಟನೆಯಲ್ಲಿ ಸಂಭವಿಸಿರುವ ಸಾವು-ನೋವುಗಳು ಹಾಗೂ ಹಾನಿಯ ಪ್ರಮಾಣದ ಕುರಿತು ಭಾರತೀಯ ವಾಯುಪಡೆಯಿಂದ ಅಧಿಕೃತ ವಿವರಗಳು ಇನ್ನಷ್ಟೇ ಪ್ರಕಟವಾಗಬೇಕಿದೆ.

ಅಪಘಾತದ ಬೆನ್ನಲ್ಲೇ ಭಾರತೀಯ ವಾಯುಪಡೆಯು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದ್ದು, ''ಜೋರ್ಹತ್‌ನಲ್ಲಿ ಇಂದು ಐಎಎಫ್‌ನ ಎಎನ್-32 ವಿಮಾನ ಅಪಘಾತಕ್ಕೀಡಾಗಿದೆ. ಹೆಚ್ಚಿನ ಮಾಹಿತಿ ಲಭ್ಯವಾದ ನಂತರ ಮುಂದಿನ ವಿವರಗಳನ್ನು ನೀಡಲಾಗುವುದು'' ಎಂದು ತಿಳಿಸಿದೆ.

ಘಟನೆಯ ಕುರಿತು ತನಿಖೆಗೆ ಆದೇಶ ನೀಡುವ ಸಾಧ್ಯತೆ ಇದ್ದು, ಅಪಘಾತದ ನಿಖರ ಕಾರಣ ಪತ್ತೆಹಚ್ಚಲು ತಾಂತ್ರಿಕ ತಜ್ಞರ ತಂಡ ಪರಿಶೀಲನೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

ಸ್ಲಂ ಜನರಿಗೆ ಕಾಂಗ್ರೆಸ್ ಸರ್ಕಾರ ನೀಡಿದ ಭರವಸೆಗಳನ್ನು ಸಿ.ಎಂ. ಡಿ.ಕೆ. ಶಿವಕುಮಾರ್ ಈಡೇರಿಸಬೇಕು : ಎ. ನರಸಿಂಹಮೂರ್ತಿ

ರಾಯಚೂರು,ಜೂ.13-

2023 ರಲ್ಲಿ ಈಗಾಗಲೇ ಕಾಂಗ್ರೆಸ್ ಸರ್ಕಾರ ಸ್ಲಂ ಜನರಿಗೆ ತಮ್ಮ ಸರ್ವಜನಾಂಗದ ಶಾಂತಿಯ ತೋಟದ ಪ್ರಣಾಳಿಕೆಯಲ್ಲಿ ನೀಡಿರುವ 10 ಭರವಸೆಗಳಲ್ಲಿ ಈಗಿನ ಮುಖ್ಯಮಂತ್ರಿ ಶ್ರೀ ಡಿ.ಕೆ.ಶಿವಕುಮಾರ್ ಈಡೇರಿಸಬೇಕು. ಇದಕ್ಕಾಗಿ ಜೂನೆ-20 ರಂದು ಗದಗನಲ್ಲಿ ಸ್ಲಂ ಜನಾಂದೋಲನ-ಕರ್ನಾಟಕ ರಾಜ್ಯ ಪ್ರತಿನಿಧಿಗಳ ಸಮಾವೇಶ ಸಲದಲಿ ಓಲೈಸಲಾಗುವುದೆಂದು ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಂಚಾಲಕರಾದ ಎ.ನರಸಿಂಹಮೂರ್ತಿ ಒತ್ತಾಯಿಸಿದರು.



ಇಂದು ನಗರದ ಕನ್ನಡ ಭವನದಲ್ಲಿ ರಾಯಚೂರು ಸ್ಲಂ ನಿವಾಸಿಗಳ ಕ್ರಿಯಾವೇದಿಕೆಗೆ ಮುಂದಿನ 3 ವರ್ಷಗಳ ಅವಧಿಗೆ ಪದಾಧಿಕಾರಿಗಳ ಆಯ್ಕೆ ಮತ್ತು ಪದಗ್ರಹಣದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಸ್ಲಂ ಜನರಿಗೆ ಕಾಂಗ್ರೆಸ್ ಸರ್ಕಾರದ ಮೇಲೆ ಇದ್ದ ನಿರೀಕ್ಷೆಗಳು ಹುಸಿಯಾಗಿವೆ. ಕಳೆದ 3 ವರ್ಷಗಳಲ್ಲಿ ಶ್ರೀ ಸಿದ್ದರಾಮಯ್ಯ ನೇತೃತ್ವಲ್ಲಿ ನಡೆದ ಸರ್ಕಾರ ಸ್ಲಂ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವ ಪ್ರಮಾಣಿಕ ಪರಯತ್ನ ಮಾಡಿಲ್ಲ. ಇದರಿಂದ ಇಲಾಖೆಯಲ್ಲಿ ದಕ್ಷ ಸಚಿವರನ್ನು ಮತ್ತು ಅಧ್ಯಕ್ಷರನ್ನು ನೇಮಿಸದೇ ಶ್ರೀ ಜಮೀರ್ ಅಹ್ಮದ್ ಎಂಬ ಉಡಾಳನಿಗೆ ನೀಡಿದಲ್ಲಿ ಸ್ಲಂ ನಿವಾಸಿಗಳಿಗೆ ನೀಡಿದ ದ್ರೋಹ ಇಂದು ಸಿದ್ದು ಮತ್ತು ಡಿ.ಕೆ.ಶಿ. ಎಂಬ ಎರಡು ಅಧಿಕಾರಿಗಳ ಕೇಂದ್ರದ ಸುರಕ್ಷತೆಯಲ್ಲಿ ನಮಗೆ ನೀಡಿದ ಭರವಸೆಗಳು ಸಾಮಾನ್ಯವಾಗಿವೆ. ಬಡಜನರ ಕಲ್ಯಾಣ ಕಾರ್ಯಕ್ರಮಗಳು ಮತು ಜನಪರ ಅಭಿವೃದ್ಧಿಗಳು ನೆನೆಗುದಿಗೆ ಬಿದ್ದಿವೆ. ಸ್ಲಂ ಜನರಿಗೆ ನೀಡಿದ ಹಕಕುಪತ್ರಗಳು, ಪ್ರಧಾನಮಂತ್ರಿ ವಸತಿ ಯೋಜನೆ, ಮೂಲಬೂತ ಸೌಕರ್ಯಗಳು ಹಳ್ಳ ಹಿಡಿದಿವೆ. ಆನವರಿ-24 ರಂದು ಹುಬ್ಬಳ್ಳಿಯಲ್ಲಿ ನಡೆದ ಸಮಾವೇಶ ಬರೀ ಪ್ರಚಾರವೇ ಹೋರತು ಸಾಧನೆಯಲ್ಲಿ ಸ್ಲಂ ಜನರಿಗೆ ನಗರ ಉದ್ಯೋಗ ಖಾತ್ರಿ, ಪ್ರತ್ಯೇಕ ಸಚಿವಾಲಯ ವಸತಿ ಹಕ್ಕು ನಗರ ಲ್ಯಾಂಡ್ ಬ್ಯಾಂಕ್, ಉಚಿತ ಮನೆ, ಬಡಜನರ ಕಡಿಮೆ ಮಾಡುವ ಘೋಷಣೆಗಳನ್ನು ಕಾಂಗ್ರೆಸ್ ಸರ್ಕಾರ ಮರೆತಿದೆ. ಇದನ್ನು ನೆರವೇರಿಸಲು ಎಂದರು.

20 ಸ್ಲಂಗಳ ಘೋಷಣೆ ಜವಾಬ್ದಾರಿ ನಮ್ಮ ಮೇಲಿದೆ : ಜನಾರ್ಧನ್ ಹಳ್ಳಿಬೆಂಚಿ

ನೂತನವಾಗಿ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಜನಾರ್ಧನ ಹಳ್ಳಿಬೆಂಚಿ ಪದಗ್ರಹಣ ಮಾಡಿ ಮಾತನಾಡಿ ಇದುವರೆಗೂ ರಾಯಚೂರು ಸ್ಲಂ ಜನರ ಕ್ರಿಯಾ ವೇದಿಕೆ 4 ಸಾವಿರ ಜನರಿಗೆ ಹಕ್ಕುಪತ್ರ ದೊರಕಿಸಿದ್ದು, ಅಂದಾಜು 1 ಸಾವಿರ ಜನರಿಗೆ ನಿವೇಶನದ ಮನೆ ಸಂಖ್ಯೆ 12 ಸ್ಲಂ ಘೋಷಣೆ ಮಾಡಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ 6 ಸಾವಿರ ಸ್ಲಂ ಜನರಿಗೆ ಹಕ್ಕುಪತ್ರ ದೊರಕಿಸಬೇಕು. 20 ಸ್ಲಂಗಳ ಘೋಷಣೆ ಮಾಡಿಸಿದ ಜವಾಬ್ದಾರಿ ನಮ್ಮ ಮೇಲಿದ. 1636 ವಿಶೇಷ ವರ್ಗದವರಿಗೆ ವಸತಿ ದೊರಕಿಸಬೇಕು. ನಗರಪಾಳಿಕೆಯ ಅನುದಾನದಲ್ಲಿ ಶೇ.20% ಸ್ಲಂಗಳ ಅಭಿವೃದ್ಧಿ ಪಡಿಸುವ ಜೊತೆಗೆ ಮಹಣಗರ ಪಾಳಿಕೆಯ ಸ್ಲಂ ನಿವಾಸಿಗಳು ಆಯ್ಕೆ ಯಾಗದಂತೆ ವಂಚಿತರಾಗಿದ್ದಾರೆ ಎಂದರು

ಸ್ಲಂ ಜನಾಂದೋಲನ ಕರ್ನಾಟಕ ರಾಯಚೂರು ಜಿಲ್ಲಾ ಸಮಿತಿಗೆ ಆಯ್ಕೆಯಾದ ಪದಾಧಿಕಾರಿಗಳ ಹೆಸರು ಮತ್ತು ಪದನಾಮ

ಅಧ್ಯಕ್ಷರು ಜನಾರ್ಧನ ಹಳ್ಳಿಬೆಂಚಿ ಉಪಾಧ್ಯಕ್ಷರು ಎಂ. ಬಸವರಾಜ ಪ್ರಧಾನ ಕಾರ್ಯದರ್ಶಿ ಸಂಘಟನಾ ಕಾರ್ಯದರ್ಶಿ

ಲಕ್ಷ್ಮಿ, ಶರಣಬಸವರೆಡ್ಡಿ ರಾಜಶೇಖರ್ ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಮಿತಿಗೆ ಆಯ್ಕೆಯಾದ ಪದಾಧಿಕಾರಿಗಳ ಹೆಸರು ಮತ್ತು ಪದನಾಮ ಜನಾರ್ಧನ್ ಹಳ್ಳಿಬೆಂಚಿ ಹರಿಜನವಾಡ, ರಾಯಚೂರು ಹುಲಿಗೆಮ್ಮ ಜ್ಯೋತಿ ಕಾಲೋನಿ, ರಾಯಚೂರು

ಎಂ. ಬಸವರಾಜ ಅಂಬೇಡ್ಕರ್ ನಗರ, ರಾಯಚೂರುನಾಗರಾಜ್ ಎಸ್ ಹರಿಜನವಾಡ ಹರಿಜನವಾಡ, ರಾಯಚೂರು

ನಿಮ್ಮೂರು ಸುದ್ದಿ

ಸಂಪಾದಕೀಯ

ದಾರಿದ್ರ್ಯದ ಗಾಯಕ್ಕೆ ಉಪ್ಪು ಮೆತ್ತಿದ ಬೆಲೆ ಏರಿಕೆ!

ದೇಶದ ಶೇ.70ಕ್ಕೂ ಹೆಚ್ಚು ಜನಸಂಖ್ಯೆ ಇಂದು ಪ್ರೊಟೀನ್ ಮತ್ತು ಸೂಕ್ಷ್ಮ ಪೋಷಕಾಂಶ ()ಗಳ ಕೊರತೆಯಿಂದ ಸಾಯುತ್ತಿರುವಾಗ, ಆರ್ಥಿಕ ಅಸಮಾನತೆಯ ಅಂತರ ಹಿಗ್ಗುತ್ತಲೇ ಇರುವಾಗ, ಭಾರತವನ್ನು ವಿಶ್ವಗುರು ಅಥವಾ ಆರ್ಥಿಕ ಸೂಪರ್ ಪರ್ವ ಎಂದು ಹೇಳಿಕೊಂಡು ಜಾಗತಿಕ ವೇದಿಕೆಗಳಲ್ಲಿ ಹಲ್ಲು ಬಿಡುವುದು ಆತ್ಮವಂಚನೆಯಾಗುತ್ತದೆ. ಅದು ಬಡವರ ಹಸಿವಿನ ಮತ್ತು ಅವರ ಶ್ರಮದ ತಟ್ಟೆಯ ಮೇಲಿನ ಕ್ರೂರಾತಿಕ್ರೂರ ಅಣಕ.

ದಿನವಿಡೀ ಸಿಮೆಂಟ್ ಮೂಟೆ ಹೊರುವ, ಇಟ್ಟಿಗೆ ಭಟ್ಟಿಯಲ್ಲಿ ಬೆವರಿಳಿಸುವ, ಗಾರ್ಮೆಂಟ್ಸ್‌ನಲ್ಲಿ ದುಡಿಯುವ, ಬೀದಿಯಲ್ಲಿ ಕೂತು ಹತ್ತಿಪ್ಪತ್ತು ರೂಪಾಯಿ ವ್ಯಾಪಾರ ಮಾಡುವ ಶ್ರಮಜೀವಿಗಳ ಕಷ್ಟ ಕಣ್ಣೀರುಗಳು ಡಿಜಿಟಲ್ ಇಂಡಿಯಾದ ಕಣ್ಣು ಕುಕ್ಕುವ ಜಾಹೀರಾತುಗಳ ಬೆಳಕಿನ ಪ್ರಖರತೆಯಲ್ಲಿ ಕಳೆದೇ ಹೋಗುತ್ತದೆ. ಉಳ್ಳವರು ಇಲ್ಲದವರ ಬದುಕನ್ನು ಇಣುಕಿ ನೋಡುವ ಗೋಜಿಗೆ ಹೋಗುವುದಿಲ್ಲ. ದೇಶದ ಜಿಡಿಪಿ () ದಾಖಲೆ ಬರೆಯುತ್ತಿದೆಯಂತೆ, ಆದರೆ ಬಡತನ ಮತ್ತು ಆರ್ಥಿಕ ಅಸಮಾನತೆಗಳು ಜಿಡಿಪಿ ಹೆಚ್ಚಳದ ದಾಖಲೆಯನ್ನು ಮುಳುಗಿಸಿವೆ! ಕೇಂದ್ರದ ನೀತಿಗಳು ಕಾರ್ಪೊರೇಟ್ ಅಭಿವೃದ್ಧಿಯ ಬೆನ್ನತ್ತಿರುವಾಗಲೇ, ಅತ್ತ ಮಧ್ಯಪ್ರಾಚ್ಯದ ಯುದ್ಧಗಳು ಜಾಗತಿಕ ಮಾರುಕಟ್ಟೆಯಲ್ಲಿ ಇಂಧನ ಮತ್ತು ರಸಗೊಬ್ಬರಗಳ ಬೆಲೆಯ ರಾಕೆಟ್ ಬುಡಕ್ಕೆ ಬೆಂಕಿ ಇಟ್ಟಿವೆ. ಇದರಿಂದ ಹೆಚ್ಚಾಗಿರುವ ಬೆಲೆ ಏರಿಕೆ ಭಾರತದ ದಾರಿದ್ರ್ಯದ ಗಾಯಕ್ಕೆ ಉಪ್ಪು ಉಜ್ಜಿದೆ. ಬೆಲೆ ಏರಿಕೆಯ ಬರೆ ಬಿದ್ದಿರುವುದು ಕೋಟ್ಯಂತರ ರೂಪಾಯಿಗಳ ಸಬ್ಸಿಡಿ ಕದಿಯುವ ಕಾರ್ಪೊರೇಟ್ ಕುಬೇರರ ಮೇಲಲ್ಲ, ಬದುಕಿನ ಬಂಡಿ ತಳ್ಳುವುದಕ್ಕೂ ಅಶಕ್ತರಾದ ಶ್ರಮಜೀವಿಗಳ ಮನೆಯ ಒಲೆಗಳ ಮೇಲೆ. ಜೀವ ಉಳಿಸಿಕೊಳ್ಳಲು ಪಡಿತರ ಸಿಗುತ್ತದಂತೆ, ಆದರೆ ದುಡಿಯುವ ದೇಹಕ್ಕೆ ಬೇಕಾದ ಶಕ್ತಿ ಯಾವುದರಿಂದ ಸಿಗಬೇಕು? ಹೊಟ್ಟೆ ತುಂಬಿಸಿಕೊಳ್ಳುವುದೇ ದೊಡ್ಡ ಸಾಹಸವಾಗಿರುವಾಗ ಪೌಷ್ಟಿಕಾಂಶ ಕನಸಿನ ಮಾತು.

ಭಾರತದಲ್ಲಿ ಸಿರಿತನ ಮತ್ತು ಬಡತನದ ನಡುವಿನ ಆರ್ಥಿಕ ಅಸಮಾನತೆಯ ಅಂತರ ಇತಿಹಾಸದಲ್ಲೇ ಹಿಂದೆಂದೂ ಕಾಣದ ಮಟ್ಟಕ್ಕೆ ಹಿಗ್ಗುತ್ತಲೇ ಸಾಗುತ್ತಿದೆ. ಇತ್ತೀಚಿನ ವರ್ಲ್ಡ್ ಇನ್‌ಇಕ್ವಾಲಿಟಿ ಲ್ಯಾಬ್ ( ) ಬಿಡುಗಡೆ ಮಾಡಿರುವ ಜಾಗತಿಕ ವರದಿಯ ಅಂಕಿ-ಅಂಶಗಳು ಈ ಅನ್ಯಾಯವನ್ನು ಬಿಚ್ಚಿಟ್ಟಿವೆ. ವರದಿಯ ಪ್ರಕಾರ, ಪ್ರಸ್ತುತ ಭಾರತದ ಒಟ್ಟು ರಾಷ್ಟ್ರೀಯ ಸಂಪತ್ತಿನ ಶೇಕಡಾ 40ಕ್ಕೂ ಅಧಿಕ ಪಾಲು ಕೇವಲ ಶೇ. 1 ರಷ್ಟು ಇರುವ ಶ್ರೀಮಂತ ಮಹಾನುಭಾವರ ಕೈಯಲ್ಲಿದೆ. ಬ್ರಿಟಿಷರ ಕಾಲೋನಿಯಲ್ ರಾಜ್ ಆಡಳಿತಾವಧಿಗಿಂತಲೂ ಭೀಕರವಾಗಿರುವ ಈ ಅಸಮಾನತೆ ಬ್ಯಾಂಕ್ ಬ್ಯಾಲೆನ್ಸ್‌ಗಳಲ್ಲಿ ಅಥವಾ ಐಷಾರಾಮಿ ಮಾಲ್‌ಗಳಲ್ಲಿ ಕಾಣಿಸುವುದಿಲ್ಲ; ಈ ದೇಶದ ಪ್ರತಿ ಬಡ ಕಾರ್ಮಿಕನ ಊಟದ ತಟ್ಟೆಯಲ್ಲಿ ಕಾಣಿಸುತ್ತದೆ. ಶ್ರೀಮಂತರ ತಟ್ಟೆಯಲ್ಲಿ ಪೌಷ್ಟಿಕಾಂಶಕ್ಕೂ ವೈವಿಧ್ಯತೆ, ವಿಲಾಸಿ ಆಹಾರ.. ತಿಂದಿದ್ದಕ್ಕಿಂತ ಟೇಸ್ಟ್ ಮಾಡಿದ್ದೇ ಹೆಚ್ಚು. ಬಡವನ ತಟ್ಟೆಯಲ್ಲಿ ನುಚ್ಚಕ್ಕಿ ಅನ್ನ!

ದೂರದ ಮಧ್ಯಪ್ರಾಚ್ಯದಲ್ಲಿ ಯುದ್ಧದ ಬಿಕ್ಕಟ್ಟು ಆರಂಭವಾಗುವುದಕ್ಕೂ ಮುನ್ನ, ಇಡೀ ಜಗತ್ತು ಕೋವಿಡ್ ಮಹಾಮಾರಿಯ ಆರ್ಥಿಕ ಆಘಾತದಿಂದ ನಿಧಾನವಾಗಿ ಚೇತರಿಸಿಕೊಳ್ಳುತ್ತಿತ್ತು. ಮಾರುಕಟ್ಟೆಯಲ್ಲಿ ಇಂಧನ ದರಗಳು, ರಸಗೊಬ್ಬರಗಳ ಬೆಲೆಗಳು ಮತ್ತು ಸಾರಿಗೆ ವೆಚ್ಚ ತಕ್ಕಮಟ್ಟಿಗೆ ಸ್ಥಿರವಾಗಿದ್ದವು. ಭಾರತದ ಬಡವರು ಮತ್ತು ಮಧ್ಯಮ ವರ್ಗದ ಜನರೂ ಸಹ ತಮ್ಮ ದಿನನಿತ್ಯದ ಗಳಿಕೆಯಲ್ಲಿ ಕನಿಷ್ಠ ಪ್ರಮಾಣದ ಬೇಳೆಕಾಳು, ತರಕಾರಿಗಳನ್ನು ಕೊಂಡು ತಟ್ಟೆಗೆ ಬಡಿಸಿಕೊಳ್ಳುವ ಶಕ್ತಿ ಹೊಂದಿದ್ದರು. ಆದರೆ ಈಗಿರುವ ಅಸಮಾನತೆಯ ತಕ್ಕಡಿ ಹಸಿವು, ಅಪೌಷ್ಟಿಕತೆ ಹೆಚ್ಚಾಗಿ ಬಡತನದ ಕಡೆಗೇ ಜೋತುಬಿದ್ದಿದೆ. ಮಧ್ಯಪ್ರಾಚ್ಯದ ಬಿಕ್ಕಟ್ಟು ತೀವ್ರಗೊಂಡ ತಕ್ಷಣ ಜಾಗತಿಕ ಇಂಧನ ಮಾರುಕಟ್ಟೆ ತಲ್ಲಣಿಸಿತು. ಕಚ್ಚಾ ತೈಲದ ದರಗಳು ಏರಿದವು, ಜಲಮಾರ್ಗದಲ್ಲಿ ಹಡಗುಗಳ ಸಂಚಾರಕ್ಕೆ ಧಕ್ಕೆಯಾಯಿತು. ಪರಿಣಾಮವಾಗಿ ಅಂತಾರಾಷ್ಟ್ರೀಯ ಸಾರಿಗೆ ವೆಚ್ಚಗಳು ಬರೋಬ್ಬರಿ ಶೇ. 300ರಷ್ಟು ದುಬಾರಿಯಾದವು. ಕೃಷಿಗೆ ಬೇಕಾದ ರಸಗೊಬ್ಬರಗಳ ಆಮದು ವೆಚ್ಚ ದುಪ್ಪಟ್ಟಾಗಿ, ಇತ್ತ ಸಾರಿಗೆ ವೆಚ್ಚವೂ ಏರಿದ್ದರಿಂದ ಮಾರುಕಟ್ಟೆಯಲ್ಲಿ ದಿನಸಿ ವಸ್ತುಗಳ ಬೆಲೆ ಸಾಮಾನ್ಯ ಗ್ರಾಹಕನ ಕೈಗೆಟುಕದೆ ಆಕಾಶದೆತ್ತರಕ್ಕೆ ಜಿಗಿಯಿತು. ಬಡವರ ಆದಾಯ ಒಂದು ರೂಪಾಯಿಯೂ ಹೆಚ್ಚಾಗಲಿಲ್ಲ, ಆದರೆ ಬದುಕುವ ವೆಚ್ಚ ಮಾತ್ರ ದುಪ್ಪಟ್ಟಾಯಿತು. ಈಗಾಗಲೇ ಪೈಸೆ ಪೈಸೆಗೂ ಲೆಕ್ಕ ಹಾಕಿ ಬದುಕುತ್ತಿದ್ದ ಕೂಲಿ ಕಾರ್ಮಿಕರಿಗೆ ಈಗ ಉಪ್ಪು-ಖಾರದಪುಡಿ ಅನ್ನ, ಹಸಿ ಮೆಣಸು-ಒಣ ರೊಟ್ಟಿಯೇ ಗತಿ. ಇದು ಅಂತಿಂಥ ಹಣದುಬ್ಬರವಲ್ಲ, ಅಕ್ಷರಶಃ ಬಡವರ ರಕ್ತ ಹೀರುತ್ತಿರುವ ಹಣದುಬ್ಬರ!

ಈ ಹಸಿವಿನ ಮತ್ತು ಪೌಷ್ಟಿಕಾಂಶದ ಕೊರತೆಯ ಅಸಲಿ ಮುಖವನ್ನು ಖ್ಯಾತ ಪೌಷ್ಟಿಕಾಂಶ ತಜ್ಞೆ ಡಾ. ಸಿಲ್ವಿಯಾ ಕರ್ಪಗಂ ಅವರ ಅಧ್ಯಯನಗಳು ಬಿಚ್ಚಿಡುತ್ತವೆ. ಅವರ ಪ್ರಕಾರ ಭಾರತದಲ್ಲಿ ದಲಿತರು, ಹಿಂದುಳಿದವರು, ಆದಿವಾಸಿಗಳು ಮತ್ತು ವಲಸೆ ಕಾರ್ಮಿಕರ ತಟ್ಟೆಗಳಿಂದ ಪ್ರೊಟೀನ್ ಅಂಶಗಳನ್ನು ವ್ಯವಸ್ಥಿತವಾಗಿ ಕಸಿದುಕೊಳ್ಳಲಾಗುತ್ತಿದೆ. ಮಾರುಕಟ್ಟೆಯಲ್ಲಿ ಬೇಳೆಕಾಳುಗಳ ಬೆಲೆ ಕೆಜಿಗೆ 150 ರಿಂದ 200 ರೂಪಾಯಿ ದಾಟಿದೆ. ಇನ್ನು ಬಡವರಿಗೆ ತೀರಾ ಸುಲಭವಾಗಿ ಹಾಗೂ ಅತ್ಯಂತ ಅಗ್ಗದ ದರದಲ್ಲಿ ಸಿಗುತ್ತಿದ್ದ ಮೊಟ್ಟೆ, ಮಾಂಸದಂತಹ ಪ್ರಾಣಿಜನ್ಯ ಪ್ರೊಟೀನ್‌ಗಳ ಮೇಲಿನ ಮೇಲ್ವರ್ಗದ ಸಾಂಸ್ಕೃತಿಕ-ರಾಜಕೀಯ ಹೇರಿಕೆಗಳು ಮತ್ತು ಮಾರುಕಟ್ಟೆಯ ನಿಯಂತ್ರಣವಿಲ್ಲದ ಹಣದುಬ್ಬರ ಶ್ರಮಜೀವಿಗಳ ದೇಹವನ್ನು ಪೌಷ್ಟಿಕಾಂಶದ ದಾರಿದ್ರ್ಯಕ್ಕೆ ದೂಡಿದೆ. ಬಡತನ ಎಂದರೆ ಕೇವಲ ಕೈಯಲ್ಲಿ ಹಣವಿಲ್ಲದಿರುವುದಲ್ಲ ಅಥವಾ ಹಸಿವಿನಿಂದ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಳ್ಳುವುದಲ್ಲ. ಹೊಟ್ಟೆ ತುಂಬ ಉಂಡರೂ ದೇಹದ ಜೀವಕೋಶಗಳಿಗೆ ಸಿಗಬೇಕಾದ ಅಗತ್ಯ ಪೋಷಕಾಂಶಗಳು ಸಿಗದೇ ಇರುವುದು ಕೂಡ ಒಂದು ರೀತಿಯ ಕಣ್ಣಿಗೆ ಕಾಣದ ಹಸಿವೇ ಆಗಿದೆ. ಪ್ರೊಟೀನ್ ಕೊರತೆಯು ಮನುಷ್ಯನ ರೋಗನಿರೋಧಕ ಶಕ್ತಿಯನ್ನು ಕುಂಠಿತಗೊಳಿಸುವುದಲ್ಲದೆ, ದೈಹಿಕ ಸಾಮರ್ಥ್ಯವನ್ನು ಒಳಗೊಳಗೇ ಹಿಂಡುತ್ತದೆ.

ಒಬ್ಬ ವಯಸ್ಕ ಕೂಲಿ ಕಾರ್ಮಿಕನ ದೇಹಕ್ಕೆ ನಿತ್ಯವೂ ಕನಿಷ್ಠ 3000 ದಿಂದ 3500 ಕ್ಯಾಲೋರಿ ಶಕ್ತಿ ಮತ್ತು 50 ರಿಂದ 60 ಗ್ರಾಂ ಪ್ರೊಟೀನ್ ಬೇಕಿರುತ್ತದೆ. ಆದರೆ, ಇಂದಿನ ಭಾರತದ ಒಬ್ಬ ಶ್ರಮಜೀವಿಗೆ ದಿನಕ್ಕೆ ಸಿಗುತ್ತಿರುವುದು ಕೇವಲ 1800 ರಿಂದ 2200 ಕ್ಯಾಲೋರಿ ಹಾಗೂ ಕೇವಲ 35 ರಿಂದ 45 ಗ್ರಾಂನಷ್ಟು ಅರೆಬರೆ ಸಸ್ಯಜನ್ಯ ಪ್ರೊಟೀನ್ ಮಾತ್ರ! ಅಂದರೆ, ದಿನಕ್ಕೆ ಬೇಕಾದ ಅಗತ್ಯ ಶಕ್ತಿಯಲ್ಲಿ ಸುಮಾರು ಶೇಕಡಾ 40 ರಷ್ಟು ಪೌಷ್ಟಿಕಾಂಶದ ಕೊರತೆಯೊಂದಿಗೆ ಶ್ರಮಿಕರು ಬದುಕುತ್ತಿದ್ದಾರೆ. ಇಂಧನವೇ ಇಲ್ಲದ ಬಂಡಿ ಎಳೆದಂತೆ ದೇಶದ ದುಡಿಯುವ ವರ್ಗದ ದೇಹಗಳು ದಿನದಿಂದ ದಿನಕ್ಕೆ ಸವೆದು ಹೋಗುತ್ತಿವೆ. ಸಂಸ್ಥೆಯ ಸಂಶೋಧನೆಗಳ ಪ್ರಕಾರ, ಲಾಕ್‌ಡೌನ್ ಸೃಷ್ಟಿಸಿದ ಆರ್ಥಿಕ ಆಘಾತದಿಂದ ಭಾರತದ ಗ್ರಾಮೀಣ ಭಾಗದ ನೈಜ ಕೂಲಿ ಪ್ರಮಾಣ ಇಂದಿಗೂ ಚೇತರಿಸಿಕೊಂಡೇ ಇಲ್ಲ. ಹಾಲು, ಹಣ್ಣು, ತರಕಾರಿಗಳು ಇವರಿಗೆ ಕನಸಿನ ವಸ್ತು. ಹವಾಮಾನ ವೈಪರೀತ್ಯ ಮತ್ತು ಜಾಗತಿಕ ಯುದ್ಧಗಳು ಬೆಲೆ ಏರಿಕೆಗೆ ಕಾರಣ ಎಂದು ರಾಜಕಾರಣಿಗಳು ಮತ್ತು ಆಡಳಿತಗಾರರು ಸುಲಭವಾಗಿ ನುಣುಚಿಕೊಳ್ಳಲು ಕಲಿತಿದ್ದಾರೆ. ಆದರೆ, ಮಾರುಕಟ್ಟೆಯಲ್ಲಿ ಬೆಲೆ ಸಿಗದೆ ರೈತ ಕಣ್ಣೀರು ಹಾಕುತ್ತಿದ್ದರೂ, ಇತ್ತ ಕಾಸು ಕೊಟ್ಟು ಕೊಳ್ಳುವ ಬಡ ಗ್ರಾಹಕನಿಗೂ ಅಗ್ಗವಾಗಿ ಸಿಗದೆ ಮಧ್ಯವರ್ತಿಗಳು ಹಾಗೂ ಕಾರ್ಪೊರೇಟ್ ಕಮಿಷನ್ ದಲ್ಲಾಳಿಗಳು ಜನರ ರಕ್ತ ಹೀರಲು ಬಿಟ್ಟಿರುವುದು ವ್ಯವಸ್ಥೆಯ ದಿವಾಳಿತನವನ್ನು ತೋರಿಸುತ್ತದೆ.

ಆರ್ಥಿಕತೆಯ ವಿಜಯಯಾತ್ರೆಯ ಜಪ ಮಾಡುತ್ತಿರುವ ಮೋದಿ-ಶಾ ಭಾರತ ಇಂದು ಹಸಿವು ಮತ್ತು ಅಪೌಷ್ಟಿಕತೆಯ ವಿಚಾರದಲ್ಲಿ ನಿಂತಿರುವುದು ಜಗತ್ತಿನ ಅತ್ಯಂತ ದರಿದ್ರ ಮತ್ತು ಯುದ್ಧಪೀಡಿತ ದೇಶಗಳ ಸಾಲಿನಲ್ಲಿ. ಇತ್ತೀಚಿನ ಜಾಗತಿಕ ಹಸಿವು ಸೂಚ್ಯಂಕದ ( ) ವರದಿಯ ಪ್ರಕಾರ, ಜಗತ್ತಿನ ಒಟ್ಟು 123 ದೇಶಗಳ ಪಟ್ಟಿಯಲ್ಲಿ ಭಾರತ 102ನೇ ಸ್ಥಾನಕ್ಕೆ ಕುಸಿದಿದೆ. ಸೂಚ್ಯಂಕದ ಮಾನದಂಡಗಳ ಪ್ರಕಾರ ಭಾರತದ ಒಟ್ಟಾರೆ ಸ್ಕೋರ್ 25.8 ರಷ್ಟಿದ್ದು, ಇದನ್ನು ಅತ್ಯಂತ ಗಂಭೀರ ಹಸಿವಿನ ಮಟ್ಟ ಎಂದು ವರ್ಗೀಕರಿಸಲಾಗಿದೆ. ತೀವ್ರ ಅಪೌಷ್ಟಿಕತೆಯಿಂದಾಗಿ ಭಾರತ ಎದುರಿಸುತ್ತಿರುವ ಈ ಬಿಕ್ಕಟ್ಟು ಉಪ-ಸಹಾರಾ ಆಫ್ರಿಕಾದ ನೈಜೀರಿಯಾ, ಇಥಿಯೋಪಿಯಾ, ಕೀನ್ಯಾ, ಸುಡಾನ್ ಹಾಗೂ ಯುದ್ಧದಿಂದ ಛಿದ್ರವಾಗಿರುವ ಯೆಮೆನ್ ಮತ್ತು ಅಫ್ಘಾನಿಸ್ತಾನಗಳ ಪರಿಸ್ಥಿತಿಗಿಂತ ಭಿನ್ನವಾಗಿಯೇನೂ ಇಲ್ಲ. ನಾವು ಜಿಡಿಪಿಯಲ್ಲಿ ನಮಗಿಂತ ತೀರಾ ಚಿಕ್ಕದಾಗಿರುವ ನೆರೆಹೊರೆಯ ಬಾಂಗ್ಲಾದೇಶ, ನೇಪಾಳ ಮತ್ತು ಪಾಕಿಸ್ತಾನಗಳಿಗಿಂತಲೂ ಈ ಪಟ್ಟಿಯಲ್ಲಿ ಕೆಳಗಿದ್ದೇವೆ.

ಇದಕ್ಕಿಂತಲೂ ಭೀಕರವಾದುದು ಇನ್ನೊಂದಿದೆ.. ವಿಶ್ವಸಂಸ್ಥೆ () ಮತ್ತು ಭಾರತದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ () ಅಂಕಿ-ಅಂಶಗಳ ಪ್ರಕಾರ, ಭಾರತದಲ್ಲಿ 5 ವರ್ಷದೊಳಗಿನ ಮಕ್ಕಳ ಒಟ್ಟು ಸಾವುಗಳಲ್ಲಿ ಶೇಕಡಾ 50ಕ್ಕೂ ಹೆಚ್ಚು ಸಾವುಗಳಿಗೆ ಅಪೌಷ್ಟಿಕತೆಯೇ ಕಾರಣ! ಅಂದರೆ, ದೇಶದಲ್ಲಿ ಪ್ರತಿವರ್ಷ ಸುಮಾರು 6 ರಿಂದ 7 ಲಕ್ಷ ಹಸುಗೂಸುಗಳು ಕೇವಲ ಒಂದು ತುತ್ತು ಪೌಷ್ಟಿಕ ಆಹಾರ ಮತ್ತು ಪ್ರೊಟೀನ್ ಇಲ್ಲದೆ, ರೋಗನಿರೋಧಕ ಶಕ್ತಿ ಕಳೆದುಕೊಂಡು ನ್ಯುಮೋನಿಯಾ ಅಥವಾ ಅತಿಸಾರದಂತಹ ಸಾಮಾನ್ಯ ಕಾಯಿಲೆಗಳಿಗೆ ಬಲಿಯಾಗುತ್ತಿವೆ. ಐದು ವರ್ಷದೊಳಗಿನ ಮಕ್ಕಳಲ್ಲಿ ಎತ್ತರಕ್ಕೆ ತಕ್ಕಂತೆ ತೂಕವಿಲ್ಲದ ಚೈಲ್ಡ್ ವೇಸ್ಟಿಂಗ್ ಪ್ರಮಾಣದಲ್ಲಿ ಜಗತ್ತಿನಲ್ಲೇ ಭಾರತ 2ನೇ ಅತಿ ಹೆಚ್ಚು ದಾರಿದ್ರ್ಯ ಸ್ಥಿತಿಯಲ್ಲಿದೆ. ಜತೆಗೆ, ದೀರ್ಘಕಾಲದ ಅಪೌಷ್ಟಿಕತೆಯಿಂದಾಗಿ ವಯಸ್ಸಿಗೆ ತಕ್ಕ ಎತ್ತರವಿಲ್ಲದ ಚೈಲ್ಡ್ ಸ್ಟಂಟಿಂಗ್ ಪ್ರಮಾಣ ಶೇ. 32.9 ರಷ್ಟಿದೆ; ಅಂದರೆ ದೇಶದ ಮೂರನೇ ಒಂದು ಭಾಗದಷ್ಟು ಮಕ್ಕಳು ಹುಟ್ಟುತ್ತಲೇ ದೈಹಿಕವಾಗಿ ಮತ್ತು ಮಾನಸಿಕವಾಗಿ ಊನರಾಗಿ ಬೆಳೆಯುತ್ತಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯ ಶೇಕಡಾ 12 ರಷ್ಟು ಜನರಿಗೆ ಇಂದಿಗೂ ದಿನದ ಕನಿಷ್ಠ ಅಗತ್ಯ ಕ್ಯಾಲೋರಿಗಳೇ ಸಿಗುತ್ತಿಲ್ಲ ಎನ್ನುತ್ತದೆ ವರದಿ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೇವಲ ಕ್ಯಾಲೋರಿ ತುಂಬಿಸುವ ಅಕ್ಕಿ ಅಥವಾ ಗೋಧಿ ನೀಡಿದರೆ ಸಾಲದು. ಪಡಿತರ ವ್ಯವಸ್ಥೆಯಲ್ಲಿ ಅಕ್ಕಿ, ಗೋಧಿಯ ಜತೆಗೆ ಬೇಳೆಕಾಳುಗಳು, ಖಾದ್ಯ ತೈಲ ಮತ್ತು ಮುಖ್ಯವಾಗಿ ಮೊಟ್ಟೆಗಳನ್ನು ಕಡ್ಡಾಯವಾಗಿ ಒದಗಿಸುವ ಮೂಲಕ ನ್ಯೂಟ್ರಿಷನ್ ಸೆಕ್ಯೂರಿಟಿ ( ) ತರಬೇಕಾದ ತುರ್ತು ಅಗತ್ಯವಿದೆ. ಇದೇನು ಸರ್ಕಾರದ ಭಿಕ್ಷೆಯಲ್ಲ, ನಾಗರಿಕರ ಹಕ್ಕು. ಒಂದು ದೇಶದ ನಿಜವಾದ ಪ್ರಗತಿ ಮತ್ತು ವಿಕಾಸವನ್ನು ಅಲ್ಲಿನ ಜಿಡಿಪಿಯಿಂದ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಬಿಲಿಯನೇರ್‌ಗಳ ಪಟ್ಟಿಯಿಂದ ಅಳೆಯಲು ಸಾಧ್ಯವಿಲ್ಲ. ಅದು ಅಳೆಯಲ್ಪಡುವುದು ಆ ದೇಶದ ಅತ್ಯಂತ ಕಟ್ಟಕಡೆಯ ಬಡ ಪ್ರಜೆಯ ಊಟದ ತಟ್ಟೆಯಲ್ಲಿರುವ ಆಹಾರದ ಗುಣಮಟ್ಟದಿಂದ ಮತ್ತು ಅವನ ಮಗುವಿನ ಆರೋಗ್ಯದಿಂದ. ದೇಶದ ಶೇ.70ಕ್ಕೂ ಹೆಚ್ಚು ಜನಸಂಖ್ಯೆ ಇಂದು ಪ್ರೊಟೀನ್ ಮತ್ತು ಸೂಕ್ಷ್ಮಪೋಷಕಾಂಶ ()ಗಳ ಕೊರತೆಯಿಂದ ಸಾಯುತ್ತಿರುವಾಗ, ಆರ್ಥಿಕ ಅಸಮಾನತೆಯ ಅಂತರ ಹಿಗ್ಗುತ್ತಲೇ ಇರುವಾಗ, ಭಾರತವನ್ನು ವಿಶ್ವಗುರು ಅಥವಾ ಆರ್ಥಿಕ ಸೂಪರ್ ಪರ್ವ ಎಂದು ಹೇಳಿಕೊಂಡು ಜಾಗತಿಕ ವೇದಿಕೆಗಳಲ್ಲಿ ಹಲ್ಲು ಕಿರಿಯುವುದು ಆತ್ಮವಂಚನೆಯಾಗುತ್ತದೆ. ಅದು ಬಡವರ ಹಸಿವಿನ ಮತ್ತು ಅವರ ಶ್ರಮದ ತಟ್ಟೆಯ ಮೇಲಿನ ಕ್ರೂರಾತಿಕ್ರೂರ ಅಣಕ. ಸರ್ಕಾರಗಳು ಕಣ್ಣುಬಿಟ್ಟು ಬೆಲೆ ಏರಿಕೆಗೆ ಬ್ರೇಕ್ ಹಾಕುವ ಮತ್ತು ತಳವರ್ಗದ ಜನರ ಪೌಷ್ಟಿಕಾಂಶದ ಹಕ್ಕನ್ನು ರಕ್ಷಿಸುವ ಜನಪರ ಆರ್ಥಿಕ ನೀತಿಗಳನ್ನು ರೂಪಿಸಬೇಕು. ಇಲ್ಲದಿದ್ದರೆ, ಈ ದೇಶದ ಶ್ರಮಜೀವಿಗಳ ಹಸಿವಿನ ಜ್ವಾಲೆ ಇಡೀ ವ್ಯವಸ್ಥೆಯನ್ನೇ ದಹಿಸಿಬಿಡಬಹುದು, ಎಚ್ಚರ!

ಜಮೀರ ಸಿದ್ದರಾಮಯ್ಯ ನಡುವೆ ಬಿರುಕು; ಕಾಂಗ್ರೆಸ್ ಎಡವುತ್ತಿರುವುದೆಲ್ಲಿ?

ಪರಮ ಆಪ್ತರೆಂದೇ ಪರಿಗಣಿತರಾಗಿರುವ ಜಮೀರ್ ಮತ್ತು ಸಿದ್ದರಾಮಯ್ಯನವರ ನಡುವೆ ಎಲ್ಲವೂ ಸರಿಯಾಗಿಲ್ಲ ಎಂಬುದು ನಿಧಾನಕ್ಕೆ ಬಯಲಾಗುತ್ತಿದೆ. ಅವನು ನನ್ನ ವಿರುದ್ಧವೇ ದಾವಣಗೆರೆಯಲ್ಲಿ ಕೆಲಸ ಮಾಡಿದ್ದಾನೆ ಎಂದು ಸಿದ್ದರಾಮಯ್ಯನವರು ಸಿಡಿಮಿಡಿಗೊಂಡಿರುವ ವಿಡಿಯೋ ವೈರಲ್ ಆಗಿದೆ.



''ಜಮೀರ್ ಅಹ್ಮದ್ ಖಾನ್ ತನ್ನ ಸಮುದಾಯದ ಪರ ನಿಂತಿದ್ದೇ ಮಹಾಪರಾಧವಾಯಿತೆ? ಕಾಂಗ್ರೆಸ್ ಪಕ್ಷದೊಳಗೆ ಅಲ್ಪಸಂಖ್ಯಾತರ ಪರವಾಗಿ ಯಾರೂ ದನಿ ಎತ್ತದೆ ಇದ್ದಾಗ ಜಮೀರ್ ಮಾತನಾಡಿದ್ದೇ ತಪ್ಪೇ?'' ಎಂದು ಮುಸ್ಲಿಂ ಸಮುದಾಯ ಕೇಳಲು ಆರಂಭಿಸಿದೆ.

ಪರಮ ಆಪ್ತರೆಂದೇ ಪರಿಗಣಿತರಾಗಿರುವ ಜಮೀರ್ ಮತ್ತು ಸಿದ್ದರಾಮಯ್ಯನವರ ನಡುವೆ ಎಲ್ಲವೂ ಸರಿಯಾಗಿಲ್ಲ ಎಂಬುದು ನಿಧಾನಕ್ಕೆ ಬಯಲಾಗುತ್ತಿದೆ. ''ಅವನು ನನ್ನ ವಿರುದ್ಧವೇ ದಾವಣಗೆರೆಯಲ್ಲಿ ಕೆಲಸ ಮಾಡಿದ್ದಾನೆ'' ಎಂದು ಸಿದ್ದರಾಮಯ್ಯನವರು ಸಿಡಿಮಿಡಿಗೊಂಡಿರುವ ವಿಡಿಯೋ ವೈರಲ್ ಆಗಿದೆ. ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಜಮೀರ್ ಅವರಿಗೆ ಸಚಿವ ಸ್ಥಾನ ದೊರಕಿಸಬೇಕು ಎಂದು ಮನವಿ ಮಾಡಲು ಜಮೀರ್ ಬೆಂಬಲಿಗರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರು. ಆ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಅಸಮಾಧಾನ ಹೊರಹಾಕಿರುವುದು ವಿಡಿಯೋದಲ್ಲಿ ಸೆರೆಯಾಗಿದೆ.

ಸಿದ್ದರಾಮಯ್ಯ ಮತ್ತು ಜಮೀರ್ ನಡುವೆ ಮನಸ್ತಾಪ ಉಂಟಾಗಿರುವುದು ಹಾಗೂ ಜಮೀರ್ ಅವರಿಗೆ ಮೊದಲ ಸುತ್ತಿನ ಖಾತೆ ಹಂಚಿಕೆಯಲ್ಲಿ ಸ್ಥಾನ ಸಿಗದೆ ಇರುವುದು ಹಲವು ರಾಜಕೀಯ ಚರ್ಚೆಗಳಿಗೆ ಆಸ್ಪದ ನೀಡಿದೆ. ಈ ಬಿರುಕು ದೊಡ್ಡದಾದಲ್ಲಿ ಕಾಂಗ್ರೆಸ್‌ಗೆ ದೊಡ್ಡ ಪೆಟ್ಟು ಬೀಳುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

''ಜಮೀರ್ ಅವರ ಹೆಸರು ಮೊದಲ ಸುತ್ತಿನ ಸಚಿವರ ಲಿಸ್ಟ್‌ನಲ್ಲೇ ಅಂತಿಮವಾಗಿತ್ತು. ಆದರೆ ಪ್ರಭಾವಿ ನಾಯಕರೊಬ್ಬರು ಅದನ್ನು ತಡೆಹಿಡಿದರು'' ಎಂಬ ಚರ್ಚೆಗಳು ಎದ್ದಿರುವ ಹೊತ್ತಿನಲ್ಲೇ, ಸಿದ್ದರಾಮಯ್ಯನವರ ಅಸಮಾಧಾನವೂ ಅದಕ್ಕೆ ತಳುಕು ಹಾಕಿಕೊಳ್ಳುತ್ತಿದೆ. ಆದರೆ ಈ ಒಡಕು ಕಾಂಗ್ರೆಸ್ ಪಕ್ಷಕ್ಕೂ ಮತ್ತು ಮುಸ್ಲಿಂ ಸಮುದಾಯದೊಳಗೂ ಯಾವ ಪರಿಣಾಮಗಳನ್ನು ಉಂಟು ಮಾಡಬಲ್ಲದು ಎಂಬುದನ್ನು ನೋಡಬೇಕಾಗುತ್ತದೆ.

''ದಾವಣಗೆರೆಯಲ್ಲಿ 84,000 ಮುಸ್ಲಿಂ ಮತದಾರರಿದ್ದಾರೆ. ಮುಸ್ಲಿಮರು ಬಹುಸಂಖ್ಯಾತರಾಗಿರುವ ಕ್ಷೇತ್ರದಲ್ಲಿ ಟಿಕೆಟ್ ಕೊಟ್ಟರೆ ನಾವು ಗೆಲ್ಲುತ್ತೇವೆ. ಮುಸ್ಲಿಂ ಕಡಿಮೆ ಸಂಖ್ಯೆಯಲ್ಲಿದ್ದರೆ ಕಷ್ಟವಾಗುತ್ತದೆ. ಈವರೆಗೆ ಶಾಮನೂರು ಶಿವಶಂಕರಪ್ಪನವರನ್ನು ಸಮುದಾಯ ಬೆಂಬಲಿಸುತ್ತಾ ಬಂದಿತ್ತು. ಅವರು ತೀರಿ ಹೋಗಿದ್ದಾರೆ. ಸಮುದಾಯಕ್ಕೆ ಆ ಸೀಟ್ ಬಿಟ್ಟುಕೊಡಿ ಎಂದು ಪಕ್ಷದ ಆಂತರಿಕ ಸಭೆಯಲ್ಲಿ ಜಮೀರ್ ಆಗ್ರಹಿಸಿದ್ದರು. ದೆಹಲಿಯ ವೀಕ್ಷಕರೂ ಈ ಸಂದರ್ಭದಲ್ಲಿ ಹಾಜರಿದ್ದರು'' ಎನ್ನುತ್ತವೆ ಕಾಂಗ್ರೆಸ್ ಮೂಲಗಳು.

ಆ ನಂತರದಲ್ಲಿ ಜಮೀರ್ ಅವರ ಮೇಲೆ ಪಕ್ಷದ ನಾಯಕರು ಕೆಂಗಣ್ಣು ಬಿಟ್ಟಂತೆ ಕಾಣುತ್ತದೆ. ಎಲ್ಲ ಪಕ್ಷದೊಳಗೂ ತಮ್ಮ ತಮ್ಮ ಜಾತಿಗಳ ಪರ ರಾಜಕಾರಣಿಗಳು ದನಿ ಎತ್ತುವುದು ಸರ್ವೇ ಸಾಮಾನ್ಯ. ಆದರೆ ಜಮೀರ್ ಅವರನ್ನು ಈ ಕಾರಣಕ್ಕೆ ವಿಚಿತ್ರವಾಗಿ ನಡೆಸಿಕೊಳ್ಳುತ್ತಿರುವುದು ಏತಕ್ಕೆ ಎಂಬುದು ಸಮುದಾಯದ ಪ್ರಶ್ನೆ.

''ಜಮೀರ್ ಅವರನ್ನು ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಅವರೇ ತಿರಸ್ಕಾರದಿಂದ ನೋಡಿದರು. ಆತ ಪ್ರಚಾರಕ್ಕೆ ಬರದಿದ್ದರೇನಂತೆ ಬಿಡ್ರಿ, ಅವನ್ಯಾವನು? ಎಂದು ಅಸಡ್ಡೆಯ ಮಾತನಾಡಿದರು. ಇದು ಜಮೀರ್ ಅವರ ಸ್ವಾಭಿಮಾನಕ್ಕೆ ಪೆಟ್ಟು ನೀಡಿತ್ತು. ಆದರೂ ಪಕ್ಷದ ಹೈಕಮಾಂಡ್ ಸೂಚನೆ ಮೇರೆಗೆ ಕೊನೆಯಲ್ಲಿ ಹೋಗಿ ಪ್ರಚಾರವನ್ನೂ ಮಾಡಿದ್ದರು'' ಎಂದು ಪಕ್ಷದ ಆಂತರಿಕ ಮೂಲಗಳು ತಿಳಿಸುತ್ತವೆ. ಈ ಎಲ್ಲ ಬೆಳವಣಿಗೆಗಳ ಕಾರಣ ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೂ ಗೆಲುವಿನ ಅಂತರ ದೊಡ್ಡ ಮಟ್ಟದಲ್ಲಿ ಕುಸಿತ ಕಾಣುತ್ತದೆ. ಹೊಸ ಸಂಪುಟ ರಚನೆಯ ಸಂದರ್ಭದಲ್ಲಿ ಜಮೀರ್ ಅವರದ್ದು ಎನ್ನಲಾದ ಆಡಿಯೊ ವೈರಲ್ ಆಗುತ್ತದೆ. ಈ ಎಲ್ಲ ಕಾರಣಗಳನ್ನು ಇಟ್ಟುಕೊಂಡು ಮುಸ್ಲಿಂ ನಾಯಕತ್ವವನ್ನು ಬಲಿಕೊಡಲಾಗುತ್ತಿದೆಯೇ ಎಂಬ ಆತಂಕವಂತೂ ಸಮುದಾಯದೊಳಗೆ ಇದೆ.

''ಮುಸ್ಲಿಂ ಶಾಸಕರೊಳಗೆ ಮೂರು ಗುಂಪುಗಳನ್ನು ಮಾಡಿದ್ದು ಯಾರು? ಕಾಂಗ್ರೆಸ್ಸಿನ ಹಿರಿಯ ನಾಯಕರೇ ಈ ಒಡಕಿಗೆ ಕಾರಣ. ಜಮೀರ್ ಅವರಿಗೆ ಸಮುದಾಯದೊಂದಿಗೆ ಗಾಢ ಒಡನಾಟವಿದೆ. ಅದನ್ನು ಕಾಂಗ್ರೆಸ್ ಅಲ್ಲಗಳೆದರೆ, ಅದರ ಪರಿಣಾಮ ಪಕ್ಷದ ಮೇಲಾಗುತ್ತದೆ'' ಎನ್ನುತ್ತಾರೆ ಹಿರಿಯ ಪತ್ರಕರ್ತ ಬಿ.ಎಂ. ಹನೀಫ್.

2012ರ ವಿಧಾನ ಪರಿಷತ್ ಚುನಾವಣೆಯನ್ನು ನೆನಪಿಸಿಕೊಳ್ಳುವ ಹನೀಫ್ ಅವರು, ''ಸಿದ್ದರಾಮಯ್ಯನವರ ಪರಮಾಪ್ತರಾಗಿದ್ದ ಭೈರತಿ ಸುರೇಶ್ ಅವರನ್ನು ಅಧಿಕೃತ ಕಾಂಗ್ರೆಸ್ ಅಭ್ಯರ್ಥಿ ಇಕ್ಬಾಲ್ ಅಹಮದ್ ಸರಡಗಿ ಅವರ ವಿರುದ್ಧ ಬಂಡಾಯ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದು ಯಾರು? ಇದೇ ಸಿದ್ದರಾಮಯ್ಯನವರು ತಾನೇ? ಅದು ಪಕ್ಷ ವಿರೋಧಿ ಚಟುವಟಿಕೆಯಲ್ಲವೇ? ಸಮುದಾಯದ ಪರ ನಿಂತು ಬಂಡಾಯ ಎದ್ದಿದ್ದು ತಪ್ಪೇ? ಪಕ್ಷ ವಿರೋಧಿ ಚಟುವಟಿಕೆ ನಡೆದಿದೆ ಎಂದು ಸಲೀಂ ಅಹ್ಮದ್, ರಿಜ್ವಾನ್ ಅರ್ಷದ್ ಅವರು ಕೆಪಿಸಿಸಿ ಕಚೇರಿಯಲ್ಲೇ ಪತ್ರಿಕಾಗೋಷ್ಠಿ ನಡೆಸಿದರು. ಇದಕ್ಕೆ ಅವಕಾಶ ಕೊಟ್ಟವರು ಯಾರು? ಪಕ್ಷದ ಒಳಗಿನ ಬಿಕ್ಕಟ್ಟನ್ನು ಶಮನ ಮಾಡುವುದು ಬಿಟ್ಟು, ಈ ರೀತಿ ಪತ್ರಿಕಾಗೋಷ್ಠಿಗೆ ಅವಕಾಶ ನೀಡಿದ್ದು ಕೂಡ ಪ್ರಮಾದವಲ್ಲವೇ'' ಎಂದು ಪ್ರಶ್ನಿಸುತ್ತಾರೆ.

ಮುಂದುವರಿದು, ''ಎಸ್‌ಡಿಪಿಐ ಪರ ಪರೋಕ್ಷವಾಗಿ ಜಮೀರ್ ಬೆಂಬಲ ನೀಡಿರಬಹುದು. ಇಂತಹ ಕೆಲಸಗಳನ್ನು ಎಲ್ಲ ರಾಜಕಾರಣಿಗಳು ಸಾಮಾನ್ಯವಾಗಿ ಮಾಡುತ್ತಾರೆ. ಕಾಂಗ್ರೆಸ್ ನೊಳಗೆ ಪಕ್ಷ ವಿರೋಧಿ ಚಟುವಟಿಕೆ ಹೊಸದೇನಲ್ಲ. 2013ರ ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯನವರು ಜಿ. ಪರಮೇಶ್ವರ್ ಅವರ ಸೋಲಿನಲ್ಲಿ ಪಾತ್ರ ವಹಿಸಿರಲಿಲ್ಲವೇ? ಸಿಎಂ ಸ್ಥಾನದ ಆಕಾಂಕ್ಷಿಯಾಗಿದ್ದ ಪರಮೇಶ್ವರ್ ಅವರನ್ನು ಮನೆಗೆ ಕಳುಹಿಸಿರಲಿಲ್ಲವೇ? ಜಮೀರ್ ಅವರು ತನ್ನ ಸ್ವಂತಕ್ಕಾಗಿ ಇಂತಹ ಕೆಲಸ ಮಾಡಿದ್ದಾರಾ? ಇಲ್ಲ, ಸಮುದಾಯಕ್ಕಾಗಿ ದನಿ ಎತ್ತಿದ್ದಾರೆ. ಪಕ್ಷದೊಳಗೆ ಸಮುದಾಯದ ಪರ ದನಿ ಎತ್ತುವವರೇ ಇಲ್ಲ, ಇದ್ದದ್ದು ಇವರೊಬ್ಬರೇ'' ಎಂದು ಮಾರ್ಮಿಕವಾಗಿ ನುಡಿಯುತ್ತಾರೆ.

ಜಮೀರ್ ಅವರನ್ನು ಪಕ್ಷ ಹೊರದೂಡಿದರೆ ಆಗುವ ಪರಿಣಾಮಗಳನ್ನು ಹನೀಫ್ ವಿವರಿಸುತ್ತಾರೆ. ''ಮುಸ್ಲಿಂ ಯುವಕರು ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಸಮುದಾಯಕ್ಕೆ ಪ್ರಾತಿನಿಧ್ಯವಿಲ್ಲ ಎಂದು ಎಚ್ಚೆತ್ತುಕೊಂಡಿದ್ದಾರೆ. ತಾವು ಕೊಟ್ಟ ಭರವಸೆಗಳನ್ನು ತಮ್ಮ ಅಧಿಕಾರವಧಿಯಲ್ಲಿ ಸಿದ್ದರಾಮಯ್ಯನವರು ಈಡೇರಿಸಲಿಲ್ಲ. ಮುಸ್ಲಿಂ ಮೀಸಲಾತಿಯನ್ನು ಮರುಸ್ಥಾಪಿಸಲಿಲ್ಲ. ಗೋಹತ್ಯೆ ನಿಷೇಧ ಕಾಯ್ದೆಯನ್ನು ವಾಪಸ್ ಪಡೆಯಲಿಲ್ಲ. ಮತಾಂತರ ನಿಷೇಧ ಕಾಯ್ದೆ ಯಥಾಸ್ಥಿತಿಯಲ್ಲೇ ಇದೆ. ಕಾಂಗ್ರೆಸ್ ಬಗ್ಗೆ ಮುಸ್ಲಿಂ ಸಮುದಾಯ ಸಮಾಧಾನ ಹೊಂದಿಲ್ಲ. ಇವರು ಮೋಸ ಮಾಡುತ್ತಿದ್ದಾರೆ ಎಂಬ ಅಭಿಪ್ರಾಯ ದಟ್ಟವಾಗುತ್ತಿದೆ. ಮುಸ್ಲಿಮರು ಏನು ಹೇಳಿದರೂ ಕೇಳುತ್ತಾರೆ ಎಂದು ಭಾವಿಸುವುದು ತಪ್ಪು. ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲೇ ಇದರ ಪರಿಣಾಮಗಳನ್ನು ಕಾಂಗ್ರೆಸ್ ಎದುರಿಸಬಹುದು. ಉದಾಹರಣೆಗೆ ಬೆಂಗಳೂರು ಸೆಂಟ್ರಲ್‌ನಲ್ಲಿ 30 ಕ್ಷೇತ್ರಗಳಲ್ಲಿ ಮುಸ್ಲಿಮರ ಪ್ರಾಬಲ್ಯವಿದೆ. ಕಾಂಗ್ರೆಸ್ ನವರು ಮುಸ್ಲಿಮರಿಗೆ 10 ಸೀಟ್ ಕೊಟ್ಟರೆ, 10ರಲ್ಲಿಯೂ ಅವರನ್ನು ಗೆಲ್ಲಿಸುತ್ತಾರೆ. ಉಳಿದ ಕ್ಷೇತ್ರಗಳಲ್ಲಿ ತಮಗೆ ಬೇಕಾದವರನ್ನು ಗೆಲ್ಲಿಸುತ್ತೇವೆ ಎಂದು ಸಮುದಾಯ ನಿರ್ಧರಿಸಿದರೆ ಕಾಂಗ್ರೆಸ್‌ಗೆ ದೊಡ್ಡ ಹೊಡೆತ ಬೀಳುತ್ತದೆ. ಮುಸ್ಲಿಂ ಸಮುದಾಯದ ಒಳಗೆ ಚರ್ಚೆಯಾಗುತ್ತಿರುವ ಈ ವಿಚಾರ ಕಾಂಗ್ರೆಸ್‌ನವರಿಗೆ ಗೊತ್ತಿಲ್ಲ. ಮೈಮರೆತು ಕೂತಿದ್ದಾರೆ'' ಎಂದು ಎಚ್ಚರಿಸುತ್ತಾರೆ.

''ಸಿದ್ದರಾಮಯ್ಯನವರು ತಮ್ಮ ಸಮುದಾಯದ ವ್ಯಕ್ತಿಗಳ ಪರ ನಿಲ್ಲಬಹುದು. ಜಮೀರ್ ತಮ್ಮ ಸಮುದಾಯದ ಪರ ನಿಲ್ಲಬಾರದೆ? ಈವರೆಗೆ ಸಿದ್ದರಾಮಯ್ಯನವರ ಪರವಾಗಿಯೇ ಜಮೀರ್ ಕೆಲಸ ಮಾಡಿದ್ದಲ್ಲವೇ?'' ಎಂದು ಕೇಳುತ್ತಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ರಾಯಚೂರು ಜಿಲ್ಲಾ ಪ್ರಚಾರ ಸಮಿತಿ ಸಂಚಾಲಕರಾಗಿ ಕೆಲಸ ಮಾಡಿರುವ ಹ್ಯಾರೀಸ್ ಸಿದ್ದಿಕಿ ಅವರು ಈ ಬೆಳವಣಿಗೆಗಳನ್ನು ಸಮುದಾಯ ಹೇಗೆ ನೋಡುತ್ತಿದೆ ಎಂದು ಈದಿನದ ಜತೆ ಹಂಚಿಕೊಂಡಿದ್ದಾರೆ.

''ಜಮೀರ್ ಹಾಗೂ ಮುಸ್ಲಿಂ ನಾಯಕರೆಲ್ಲ ಸೇರಿ 2023ರಲ್ಲಿ ಇದೇ ಸಿದ್ದರಾಮಯ್ಯನವರಿಗಾಗಿಯೇ ಶೇ.100ರಷ್ಟು ಮುಸ್ಲಿಮರನ್ನು ಒಗ್ಗಟ್ಟು ಮಾಡಿದರು. ಜಮೀರ್ ಅವರು ಮುಂದಾಳತ್ವ ವಹಿಸಿದ್ದರು. ಮುಸ್ಲಿಮರು ಈ ಪರಿಯಲ್ಲಿ ಒಂದಾಗದಿದ್ದರೆ ಕನಿಷ್ಠ 75 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸುತ್ತಿತ್ತು. ಇದನ್ನು ಸಿದ್ದರಾಮಯ್ಯನವರು ಪರಿಗಣನೆಗೆ ತೆಗೆದುಕೊಳ್ಳಬೇಕು. ಒಂದು ಘಟನೆ ಅವರ ವಿರುದ್ಧ ಆಗಿರಬಹುದು. ಸಮುದಾಯದಿಂದ ಒತ್ತಡ ಇದ್ದಿದ್ದರಿಂದ ಜಮೀರ್ ಆ ನಿಲುವು ತಾಳಬೇಕಾಯಿತು. ಸಮುದಾಯ, ಜನಸಾಮಾನ್ಯರು ಪಕ್ಷಕ್ಕಿಂತ ಮುಖ್ಯ ಎಂಬುದು ನೆನಪಿರಲಿ. ಅವರೇ ಅಂತಿಮ ಹೈಕಮಾಂಡ್'' ಎಂದು ಅಭಿಪ್ರಾಯಪಡುತ್ತಾರೆ.

''ಜಮೀರ್ ಅವರ ರಾಜಕೀಯ ರೀತಿಯ ಬಗ್ಗೆ ಭಿನ್ನಾಭಿಪ್ರಾಯ ಹೊಂದಿರುವವರಲ್ಲಿ ನಾನೂ ಒಬ್ಬ. ಆದರೆ ಅವರು ಸಮುದಾಯದ ಮಾಸ್ ಲೀಡರ್ ಎಂಬುದು ನಿಜ'' ಎನ್ನುವ ಅವರು, ''ಮುಸ್ಲಿಂ ನಾಯಕತ್ವದೊಳಗೆ ಕಾಂಗ್ರೆಸ್ ಪಕ್ಷ ವಿಭಜನೆ ಮಾಡುತ್ತಿದೆ ಎಂದು ಸಮುದಾಯ ಭಾವಿಸಿದೆ. ರಾಜೀಸಂಧಾನ ಮಾಡಬೇಕಿದ್ದವರು ಎಡವಿದ್ದಾರೆ'' ಎಂದು ಬೇಸರ ವ್ಯಕ್ತಪಡಿಸುತ್ತಾರೆ.

''ಶಾಮನೂರು ಶಿವಶಂಕರಪ್ಪ ಅವರು ಬಿಜೆಪಿಗೆ ವೋಟ್ ಹಾಕಲು ಹೇಳಿದ್ದರು. ಅದು ಪಕ್ಷ ವಿರೋಧಿಯಲ್ಲವೇ? ಎನ್ ಎಸ್ ಬೋಸರಾಜ್ ವಿರುದ್ಧ ಮೂವರು ದೂರು ನೀಡಿದ್ದರು. ಬೋಸರಾಜ್ ವಿರುದ್ಧ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ. ಬರೀ ಜಬ್ಬಾರ್ ಸಲೀಂ, ರಿಜ್ವಾನ್, ಜಮೀರ್ ಇವರಷ್ಟೇ ಕ್ರಮ ತೆಗೆದುಕೊಳ್ಳಲು ಸಿಗುತ್ತಾರಾ? ಬೇರೆಯವರು ಸಿಗುವುದಿಲ್ಲವೇ? ಈ ಸಮುದಾಯ ನೂರಕ್ಕೆ ನೂರರಷ್ಟು ಕಾಂಗ್ರೆಸ್ ಪರವಾಗಿದೆ. ಆದರೂ ಕ್ರಮ ತೆಗೆದುಕೊಳ್ಳುತ್ತೀರಿ ಎಂದರೆ ಏನರ್ಥ?'' ಎಂದು ಪ್ರಶ್ನಿಸುತ್ತಾರೆ.

43ರ ಗಾರ್ಡನ್‌ನಿಂದ 17ರ ಮೊರಾವರೆಗೆ: ಫಿಫಾ ವಿಶ್ವಕಪ್‌ನ ಅಚ್ಚರಿಯ ಸಂಗತಿಗಳು

ಉತ್ತರ ಅಮೆರಿಕ ಖಂಡದಲ್ಲಿ ಆರಂಭವಾಗಿರುವ 2026ರ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯು ಈ ಬಾರಿ ಹಲವು ವಿಶೇಷತೆಗಳಿಗೆ ಸಾಕ್ಷಿಯಾಗಲಿದೆ. ದಾಖಲೆಯ 48 ತಂಡಗಳು ಮತ್ತು ಬರೋಬ್ಬರಿ 1,248 ಆಟಗಾರರು ಈ ಮಹಾಸಮರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಕ್ರೀಡಾಭಿಮಾನಿಗಳ ಕುತೂಹಲ ತಣಿಸುವ ನಿಟ್ಟಿನಲ್ಲಿ, ಪಂದ್ಯಾವಳಿಯ ಪ್ರಮುಖ ಅಂಕಿ-ಅಂಶಗಳು ಮತ್ತು ವಾಸ್ತವಿಕ ಮಾಹಿತಿಗಳ ವಿವರ ಇಲ್ಲಿದೆ.

ಅತಿ ಹಿರಿಯ ಹಾಗೂ ಕಿರಿಯ ಆಟಗಾರರು

ಈ ಬಾರಿಯ ಫುಟ್‌ಬಾಲ್ ಹಬ್ಬವು ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ದೇಶಗಳಾದ್ಯಂತ ನಡೆಯಲಿದ್ದು, ಒಟ್ಟು 16 ಆತಿಥೇಯ ನಗರಗಳನ್ನು ಆಯ್ಕೆ ಮಾಡಲಾಗಿದೆ. ಈ ಪೈಕಿ ಅತಿ ಹೆಚ್ಚು, ಅಂದರೆ 11 ನಗರಗಳು ಅಮೆರಿಕದಲ್ಲಿವೆ. ಸ್ಕಾಟ್ಲೆಂಡ್ ತಂಡದ 43 ವರ್ಷದ ಕ್ರೇಗ್ ಗಾರ್ಡನ್ ಅವರು ಈ ಬಾರಿಯ ವಿಶ್ವಕಪ್‌ನಲ್ಲಿ ಕಣಕ್ಕಿಳಿಯುತ್ತಿರುವ ಅತಿ ಹಿರಿಯ ಆಟಗಾರರಾಗಿದ್ದಾರೆ. ಅಷ್ಟೇ ಅಲ್ಲದೆ, ಇವರು ವಿಶ್ವಕಪ್ ಇತಿಹಾಸದಲ್ಲೇ ಆಡುತ್ತಿರುವ ಎರಡನೇ ಅತಿ ಹಿರಿಯ ಫುಟ್‌ಬಾಲಿಗ ಎಂಬ ಹೆಗ್ಗಳಿಕೆಗೂ ಪಾತ್ರರಾಗಲಿದ್ದಾರೆ. ಇವರೊಂದಿಗೆ ಪೋರ್ಚುಗಲ್‌ನ ದಂತಕಥೆ 41 ವರ್ಷದ ಕ್ರಿಸ್ಟಿಯಾನೊ ರೊನಾಲ್ಡೊ ತಮ್ಮ ವೃತ್ತಿಜೀವನದ 6ನೇ ವಿಶ್ವಕಪ್ ಆಡುತ್ತಿದ್ದಾರೆ. 40 ವರ್ಷದ ಲುಕಾ ಮೊಡ್ರಿಕ್ (ಕ್ರೊಯೇಷಿಯಾ) ಮತ್ತು ಗಿಲ್ಲೆರ್ಮೊ ಓಚೋವಾ (ಮೆಕ್ಸಿಕೊ) ಕೂಡ 40ರ ಹರೆಯದ ಪ್ರಮುಖ ಆಟಗಾರರಾಗಿದ್ದಾರೆ.

ಮತ್ತೊಂದೆಡೆ, ಮೆಕ್ಸಿಕೊ ತಂಡದ 17 ವರ್ಷದ ಗಿಲ್ಬರ್ಟೊ ಮೊರಾ ಅವರು ಈ ಟೂರ್ನಿಯ ಅತಿ ಕಿರಿಯ ಆಟಗಾರ ಎನಿಸಿಕೊಂಡಿದ್ದಾರೆ. ಮೆಕ್ಸಿಕೊ ತಂಡವನ್ನು ಪ್ರತಿನಿಧಿಸುತ್ತಿರುವ ಅತಿ ಕಿರಿಯ ಆಟಗಾರ ಎಂಬ ದಾಖಲೆ ಇವರದ್ದಾದರೂ, ವಿಶ್ವಕಪ್ ಇತಿಹಾಸದ ಅತಿ ಕಿರಿಯ ಆಟಗಾರ ಎಂಬ ಒಟ್ಟಾರೆ ದಾಖಲೆ ಇನ್ನೂ 1982ರಲ್ಲಿ ಆಡಿದ ನಾರ್ದರ್ನ್ ಐರ್ಲೆಂಡ್‌ನ ನಾರ್ಮನ್ ವೈಟ್‌ಸೈಡ್ ಹೆಸರಿನಲ್ಲೇ ಇದೆ.



ಅತಿ ಹೆಚ್ಚು ಬಾರಿ ದಾಖಲಾದ ಫಲಿತಾಂಶ

ಫುಟ್‌ಬಾಲ್‌ನಲ್ಲಿ ಸಾಮಾನ್ಯವಾಗಿ ಕಡಿಮೆ ಗೋಲುಗಳು ದಾಖಲಾಗುತ್ತವೆ ಎಂಬುದನ್ನು ವಿಶ್ವಕಪ್ ಇತಿಹಾಸವೇ ಸಾಬೀತುಪಡಿಸಿದೆ. ಈವರೆಗೆ ನಡೆದಿರುವ ಪಂದ್ಯಗಳ ಪೈಕಿ ಒಟ್ಟು 182 ಪಂದ್ಯಗಳು (ಅಂದರೆ ಶೇ. 20ರಷ್ಟು) 1-0 ಗೋಲುಗಳ ಅಂತರದಲ್ಲಿ ಅಂತ್ಯಗೊಂಡಿದ್ದು, ಇದು ಅತ್ಯಂತ ಸಾಮಾನ್ಯ ಫಲಿತಾಂಶವಾಗಿದೆ. ತದನಂತರ 2-1 ಅಂತರದ ಫಲಿತಾಂಶ ಅತಿ ಹೆಚ್ಚು ಬಾರಿ ಬಂದಿದೆ. ಇನ್ನು 1982ರ ವಿಶ್ವಕಪ್‌ನ ಉದ್ಘಾಟನಾ ಹಂತದ ಪಂದ್ಯದಲ್ಲಿ ಎಲ್ ಸಾಲ್ವಡಾರ್ ವಿರುದ್ಧ ಹಂಗೇರಿ 10-1 ಗೋಲುಗಳ ಅಂತರದಿಂದ ಜಯ ಸಾಧಿಸಿದ್ದು ಒಂದು ಪಂದ್ಯದಲ್ಲಿ ದಾಖಲಾದ ಅತಿ ಹೆಚ್ಚು ಗೋಲುಗಳ ಅಪರೂಪದ ದಾಖಲೆಯಾಗಿದೆ.

ಅತಿ ಹೆಚ್ಚು ರೆಡ್ ಕಾರ್ಡ್ ಪಡೆದವರು

ಮೈದಾನದಲ್ಲಿ ಗಂಭೀರ ತಪ್ಪು ಮಾಡಿದರೆ ಆಟಗಾರನಿಗೆ ರೆಡ್ ಕಾರ್ಡ್ ನೀಡಿ ಹೊರಕಳುಹಿಸಲಾಗುತ್ತದೆ. 1930ರಿಂದ ಈವರೆಗೆ ಬ್ರೆಜಿಲ್ ತಂಡ 9 ಪಂದ್ಯಗಳಲ್ಲಿ ಒಟ್ಟು 11 ರೆಡ್ ಕಾರ್ಡ್‌ಗಳನ್ನು ಪಡೆದಿದ್ದು, ಇದು ತಂಡವೊಂದು ಪಡೆದ ಅತಿ ಹೆಚ್ಚು ರೆಡ್ ಕಾರ್ಡ್‌ಗಳಾಗಿವೆ (ಬ್ರೆಜಿಲ್ ಕೊನೆಯದಾಗಿ 2010ರಲ್ಲಿ ರೆಡ್ ಕಾರ್ಡ್ ಪಡೆದಿತ್ತು). ಆಟಗಾರರ ಪೈಕಿ ಕ್ಯಾಮರೂನ್‌ನ ರಿಗೋಬರ್ಟ್ ಸಾಂಗ್ ಮತ್ತು ಫ್ರಾನ್ಸ್‌ನ ಜಿನೆಡಿನ್ ಜಿಡಾನೆ ಮಾತ್ರ ವಿಶ್ವಕಪ್ ಇತಿಹಾಸದಲ್ಲಿ ತಲಾ ಎರಡು ಬಾರಿ ರೆಡ್ ಕಾರ್ಡ್ ಪಡೆದಿದ್ದಾರೆ. 2006ರ ಫೈನಲ್‌ನಲ್ಲಿ ಜಿಡಾನೆ ಅವರು ಇಟಲಿ ಆಟಗಾರನ ಎದೆಗೆ ತಲೆಯಿಂದ ಗುದ್ದಿ ರೆಡ್ ಕಾರ್ಡ್ ಪಡೆದದ್ದು ವಿಶ್ವಕಪ್ ಇತಿಹಾಸದ ಕರಾಳ ಘಟನೆಗಳಲ್ಲಿ ಒಂದಾಗಿದೆ.

ಕ್ಲಬ್‌ವೊಂದರ ಅತಿ ಹೆಚ್ಚು ಪ್ರತಿನಿಧ್ಯ

ಇಂಗ್ಲಿಷ್ ಪ್ರೀಮಿಯರ್ ಲೀಗ್‌ನ () ಪ್ರಸಿದ್ಧ ಮ್ಯಾಂಚೆಸ್ಟರ್ ಸಿಟಿ ಕ್ಲಬ್‌ನ ಬರೋಬ್ಬರಿ 19 ಆಟಗಾರರು ಈ ವಿಶ್ವಕಪ್‌ನಲ್ಲಿ ವಿವಿಧ ದೇಶಗಳನ್ನು ಪ್ರತಿನಿಧಿಸುತ್ತಿದ್ದಾರೆ. ಈ ಆಟಗಾರರು 3 ಖಂಡಗಳ 12 ವಿವಿಧ ರಾಷ್ಟ್ರೀಯ ತಂಡಗಳ ಪರ (ಉದಾಹರಣೆಗೆ; ಬೆಲ್ಜಿಯಂ, ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್, ಪೋರ್ಚುಗಲ್ ಇತ್ಯಾದಿ) ಕಣಕ್ಕಿಳಿಯುತ್ತಿರುವುದು ಈ ಬಾರಿಯ ವಿಶೇಷತೆಯಾಗಿದೆ.

ಅಮೆರಿಕ ತಂಡದ ವಿಶ್ವಕಪ್ ಇತಿಹಾಸ

ಅಮೆರಿಕ ತಂಡವು ಇದುವರೆಗೆ 12 ಬಾರಿ ಫಿಫಾ ವಿಶ್ವಕಪ್‌ನಲ್ಲಿ ಸ್ಪರ್ಧಿಸಿದೆ. 1930ರಲ್ಲಿ ನಡೆದ ಮೊದಲ ವಿಶ್ವಕಪ್‌ನಲ್ಲಿ 13 ತಂಡಗಳ ಪೈಕಿ 3ನೇ ಸ್ಥಾನ ಪಡೆದದ್ದು ಅದರ ಅತ್ಯುತ್ತಮ ಸಾಧನೆಯಾಗಿದೆ. ಇತ್ತೀಚಿನ ವರ್ಷಗಳ ಸಾಧನೆಯನ್ನು ಗಮನಿಸಿದರೆ, 2002ರಲ್ಲಿ ಕ್ವಾರ್ಟರ್-ಫೈನಲ್ ಪ್ರವೇಶಿಸಿ 8ನೇ ಸ್ಥಾನ ಪಡೆದಿದ್ದು ಮೈಲಿಗಲ್ಲಾಗಿದೆ. ಕಳೆದ 2022ರ ವಿಶ್ವಕಪ್‌ನಲ್ಲಿ ಅಮೆರಿಕ ತಂಡ 14ನೇ ಸ್ಥಾನ ಪಡೆದಿತ್ತು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR